ವಿಜಯಪುರ | ಸಂಪುಟ 01 | ಸಂಚಿಕೆ 279 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಭಾನುವಾರ ಡಿಸೆಂಬರ್ 31, 2023

“ರಾಷ್ಟ್ರೀಯ ಹೆದ್ದಾರಿಯಿಂದ ನಾಲ್ಕು ರಾಜ್ಯಗಳ ಸಂಪರ್ಕಕೊಂಡಿರಾಗಿರುವ ಸಿಂದಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಎಲ್ಲ ತಾಲೂಕುಗಳಿಗಿಂತ ಮುಂದಿದೆ. ಹೀಗಾಗಿ ಸಿಂದಗಿ ಜಿಲ್ಲೆಯಾಗುವುದರಲ್ಲಿ ಸಂದೇಹವಿಲ್ಲ.



– ಅಶೋಕ ಮನಗೂಳಿ
ಶಾಸಕರು, ಸಿಂದಗಿ

ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟನೆ | ಬಿಎಸ್ವೈ ಮೇಲಿನ ಆರೋಪಕ್ಕೆ ದಾಖಲೆ ಕೊಡಲಿ | ರಾಜ್ಯಾಧ್ಯಕ್ಷ ಮಾಡಿದವರು ಬಿಎಸ್ವೈ ಅಲ್ಲ

# ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡುವುದೇ ನಮ್ಮ ಗುರಿ

ವಿಜಯಪುರ: ಮಾಜಿ ಸಿಎಂ ಬಿ ಎಸ್ ಯಡಿಯೂರಪ್ಪ ಬಗ್ಗೆ ಯಾರೂ ಯಾವುದೇ ಅನುಕಂಪ ತೋರಿಸುವ ಅಗತ್ಯವಿಲ್ಲ, ಆರೋಪ ಮಾಡಿದವರು ದಾಖಲೆ ಇದ್ರೆ ಸರ್ಕಾರಕ್ಕೆ ಕೊಡಲಿ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಮಾಜಿ ಸಿಎಂ ಬಿ ಎಸ್ ವೈ ವಿರುದ್ಧ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ ವಿಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ಮೌನ ವಹಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಅವರು ಶನಿವಾರ ನಗರದಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ ಅವರು, ಆರೋಪದಲ್ಲಿ ಸತ್ಯಾಂಶ ಇದ್ರೆ ಪ್ರತಿಕ್ರಿಯೆ ಬರ್ತದೆ. ಹುಡುಗಾಟಿಕೆಯ ಹೇಳಿಕೆ ಇದ್ರೆ ಬರೊಲ್ಲ ಎಂದು ಶಾಸಕ ಯತ್ನಾಳ ಆರೋಪಕ್ಕೆ ಟಾಂಗ್ ನೀಡಿದರು.

ನಾನು ರಾಜ್ಯಾಧ್ಯಕ್ಷನಾಗಿ ಮೊದಲ ಭಾರಿಗೆ ಇಲ್ಲಿಗೆ ಭೇಟಿ ಕೊಟ್ಟಿದ್ದೇನೆ, ನನ್ನನ್ನು ರಾಜ್ಯಾಧ್ಯಕ್ಷನನ್ನಾಗಿ

ಯಡಿಯೂರಪ್ಪನವರು ಮಾಡಿಲ್ಲ,



ಪ್ರಧಾನಿ ಮೊದಿ, ಜೆ ಪಿ ನಡ್ಡಾ, ಸೇರಿದಂತೆ ರಾಷ್ಟ್ರೀಯ ನಾಯಕರು ಮಾಡಿದ್ದಾರೆ. ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ ಮೇಲೆ ಎಲ್ಲರೂ ಸಹಕಾರ, ಆಶೀರ್ವಾದ ಮಾಡಿದ್ದಾರೆ ಎಂದರು.

ಹೊಸ ವರ್ಷದ ಹೊಸ್ತಿಲಲ್ಲಿ ನಾವು ಇದ್ದೇವೆ. ಎಲ್ಲ ಹಳೆಯ ವಿಚಾರಗಳನ್ನು ಬದಿಗಿಟ್ಟು ಎಲ್ಲರ ವಿಶ್ವಾಸ ತೆಗೆದುಕೊಂಡು ನಾನು ಮುನ್ನಡೆಯುತ್ತೇನೆ. ನಾನು ಇಟ್ಟ ಗುರಿಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ, ಲೋಕಸಭೆ ಗೆಲ್ಲಬೇಕು, ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡಬೇಕೆಂಬುದೇ ನಮ್ಮ ಪ್ರಮುಖ ಧ್ಯೇಯವಾಗಿದೆ ಎಂದರು.

## ಮತದಾರರಿಂದ ಕಾಂಗ್ರೆಸ್‌ಗೆ ಹಿಡಿಶಾಪ

ವಿಜಯಪುರ: ಕಾಂಗ್ರೆಸ್ ಸರ್ಕಾರ ಕಣ್ಣಿದ್ದೂ ಕುರುಡನಂತೆ, ಕಿವಿ ಇದ್ದೂ ಕಿವುಡನಂತೆ ವರ್ತಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಕಾರ್ಯಕರ್ತರ ಸಭೆಯಲ್ಲಿ ಅವರು ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಏಳು ತಿಂಗಳು ಕಳೆದಿದೆ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾರಣರಾದ ಮತದಾರರು ಕಾಂಗ್ರೆಸ್ ಗೆ ಇಂದು ಶಾಪ ಹಾಕ್ತಿದಾರೆ. ರಾಜ್ಯ ಸರ್ಕಾರ ಆರೇಳು ತಿಂಗಳಲ್ಲೇ ತನ್ನ ಜನಪ್ರೀಯತೆ ಕಳೆದುಕೊಂಡಿದೆ ಎಂದು ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಬರಗಾಲ ಇದೆ, ರೈತರು ಸಂಕಷ್ಟದಲ್ಲಿದ್ದಾರೆ. ರೈತರಿಗೆ, ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ನೀಡಬೇಕು, ಆರ್ಥಿಕ ಶಕ್ತಿ ನೀಡಬೇಕು ಎಂದು ನಾವು ಸದನದಲ್ಲಿ ಒತ್ತಾಯಿಸಿದ್ದೇವೆ ಎಂದರು.

ಉಸ್ತುವಾರಿ ಸಚಿವರು ಜಿಲ್ಲಾ ಪ್ರವಾಸ ಮಾಡಿ, ಬರಗಾಲದ ಸಭೆ ಮಾಡ್ತಿಲ್ಲ, ಕಂದಾಯ ಸಚಿವರು ಎಸಿ ರೂಂ ನಲ್ಲಿ ಕುಳಿತು ಸಭೆ ಮಾಡ್ತಿದಾರೆ ಎಂದು ಆರೋಪಿಸಿದರು.

ಈ ಸರ್ಕಾರಕ್ಕೆ ರೈತರಿಗೆ ಪರಿಹಾರ ಕೊಡುವ ಯೋಗ್ಯತೆ ಇಲ್ಲ, ಈ ಸಮಯದಲ್ಲಿ 10 ಸಾವಿರ ಕೋಟಿ ಅಲ್ಪಸಂಖ್ಯಾತರಿಗೆ ಕೊಡ್ತೇವೆ ಎಂದು ಸಿಎಂ ಹೇಳ್ತಾರೆ, ಈಗಾಗಲೇ ಆದೇಶ ಮಾಡಿದ್ದಾರೆ, ರಾಜ್ಯ ಸರ್ಕಾರದ ಆದ್ಯತೆ ರೈತರಲ್ಲ, ಅವರ ಆದ್ಯತೆ ಅಲ್ಪಸಂಖ್ಯಾತರು. ಅಲ್ಪಸಂಖ್ಯಾತರ ತುಷ್ಟಿಕರಣ ನೀತಿಗೆ ಲೋಕಸಭಾ ಚುನಾವಣೆಯಲ್ಲಿ ಉತ್ತರ ಸಿಗುತ್ತೆ, ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ಪರಿಸ್ಥಿತಿ ಏನಾಗುತ್ತೆ ನೋಡಿ ಎಂದು ಭವಿಷ್ಯ ನುಡಿದರು.

ರಾಜ್ಯದ ಶಿಕ್ಷಣ ಸಚಿವ ಚೆಕ್ ಬೌನ್ಸ್ ಪ್ರಕರಣದಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಡಲಿದೆ ಎಂದು ಭವಿಷ್ಯ ನುಡಿದರು.

ಈ ಸರಕಾರ ಬಂದ ಮೇಲೆ ಶಾಸಕರಿಗೆ ಒಂದು ರೂಪಾಯಿ ಕೂಡ ಅನುದಾನ ಕೊಟ್ಟಿಲ್ಲ. ನಿಮ್ಮ ಬೂಟಾಟಿಕೆ ರಾಜಕಾರಣ, ಅಲ್ಪಸಖ್ಯಾತರ ತುಷ್ಟಿಕರಣ ಬದಿಗಿಟ್ಟು ಕ್ಷೇತ್ರಗಳ ಅಭಿವೃದ್ಧಿಗೆ ಶಾಸಕರಿಗೆ ಹಣ ಕೊಡಬೇಕು ಎಂದು ಬಿ. ವೈ. ವಿಜಯೇಂದ್ರ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಸದ ರಮೇಶ ಜಿಗಜಿಣಗಿ, ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಎಸ್. ಪಾಟೀಲ ಕೂಚಬಾಳ, ಮಾಜಿ ಸಚಿವರಾದ ಮುರುಗೇಶ ನಿರಾಣಿ, ಸಂಗಣ್ಣ ಕೆ. ಬೆಳ್ಳುಬ್ಬಿ, ಮಾಜಿ ಶಾಸಕರಾದ ರಮೇಶ ಭೂಸನೂರ, ಸೋಮನಗೌಡ ಪಾಟೀಲ, ಬಿಜೆಪಿ ಮುಖಂಡ ಸುರೇಶ ಬಿರಾದಾರ ಸೇರಿದಂತೆ ಅನೇಕ ಮುಖಂಡರಿದ್ದರು

## ರಾಜ ನುಡಿ

ಬದುಕಲ್ಲಿ ನಮ್ಮ ಹತ್ತಿರ ಯಾರಿದ್ದಾರೆ ಎಂದು ತಿಳಿಯೋಕೆ ಬಹಳ ದೂರ ನಡೆದು ಬರಬೇಕಾಗುತ್ತೆ. ಅಲ್ಪ ಸಮಯ ಮಾತ್ರ, ನಮ್ಮ ಜೊತೆ ಯಾರು ನಿಲ್ತಾರೆ ಎಂದು ತಿಳಿಯೋಕೆ, ಅತೀ ಹೆಚ್ಚಿನ ಸಮಯ ಅಂತವರ ಜೊತೆ ಕಳೆಯಬೇಕಾಗುತ್ತೆ. ಕ್ಷಣದಲಿ ಬರುವ ಮರಣವೇನೆಂದು ತಿಳಿಯಲು ಇಡೀ ಬದುಕು ಸವೆಸಿದಂತೆ. ಇದನ್ನು ತಿಳಿಯುವುದರೊಳಗೆ ತೀರ ತಲುಪಿರುತ್ತೇವೆ. ಲೈಫು ಇಷ್ಟೇನ್ಲೆ..

–ಡಾ. ರಾಜಶೇಖರ ನಾಗೂರ

ಆಲಮೇಲದಲ್ಲಿ ಸಹಕಾರ ಸಂಘದ ಕಟ್ಟಡ ಉದ್ಘಾಟಿಸಿ ಸಚಿವ ಶಿವಾನಂದ ಪಾಟೀಲ ಕರೆ

# ಕೃಷಿಯಲ್ಲಿ ನೂತನ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು

ಉದಯರಶ್ಮಿ ನ್ಯೂಸ್

ವಿಜಯಪುರ: ರೈತರು ಹೊಸ ತಂತ್ರಜ್ಞಾನ ಹಾಗೂ ವೈಜ್ಞಾನಿಕತೆಯಿಂದ ಕೂಡಿದ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು. ಅದರೊಂದಿಗೆ ಸಮಗ್ರ ಕೃಷಿ ಪದ್ಧತಿಯನ್ನು ಬಳಸಿಕೊಳ್ಳಬೇಕು ಎಂದು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಶನಿವಾರ ಆಲಮೇಲ ಪಟ್ಟಣದಲ್ಲಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು.



ಒಂದೇ ಬೆಳೆಗ ಸೀಮಿತವಾಗದೆ ವಿವಿಧ ರೀತಿಯ ಬೆಳೆಗಳನ್ನು ಬೆಳೆಯಬೇಕು. ಅದರಲ್ಲಿ ಒಂದರ ಬೆಲೆ ಇಲ್ಲದಿದ್ದಲ್ಲಿ ಇನ್ನೊಂದು ಬೆಳೆಯ ಬೆಲೆ ಇರುತ್ತದೆ. ಸಮಗ್ರ ಕೃಷಿಗೆ ಹೆಚ್ಚು ಒತ್ತು ನೀಡಬೇಕು. ಮಳೆ ಕಡಿಮೆ ಆದ ಸಂದರ್ಭದಲ್ಲಿ ಕೂಡ ಅದಕ್ಕೆ ಹೊಂದುಕೊಳ್ಳುವಂತಹ ಬೇಸಾಯ ಪದ್ಧತಿಗಳನ್ನು ರೈತರು ರೂಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಈ ಭಾಗದ ಸಾರ್ವಜನಿಕರ ಬಹು ದಿನಗಳ ಬೇಡಿಕೆಯಾದ ಕಡಣಿ ಬಾಂದಾರ ನಿರ್ಮಾಣ ಹಾಗೂ ತೋಟಗಾರಿಕೆ ಕಾಲೇಜ್ ಮಂಜೂರಾಗಿದ್ದು ಈಗಾಗಲೇ ಸಂಬಂಧಿಸಿದ ಸಚಿವರನ್ನು ಭೇಟಿಯಾಗಿ ಮನವರಿಕೆ ಮಾಡಲಾಗಿದ್ದು ಆದಷ್ಟು ಶೀಘ್ರ ಕ್ರಮವಹಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಅವರು ತಿಳಿಸಿದರು.


ಮಾಜಿ ಶಾಸಕ ರಮೇಶ ಭೂಸನೂರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಆಲಮೇಲದ ಗುರುಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ಆಲಮೇಲ ದೇವರಗುಡ್ಡ ಗುರುಪೀಠದ ಒಡೆಯ ಡಾ.ಸಂದೀಪ ಜೆ.ಪಾಟೀಲ, ಅಳ್ಳೊಳ್ಳಿ ಹಿರೇಮಠದ ಶ್ರೀಶೈಲಯ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಹಕಾರ ಸಂಘದ ಅಧ್ಯಕ್ಷೆ ಶ್ರೀಮತಿ ಭಾರತಿ ಕೋಳಾರಿ ಅಧ್ಯಕ್ಷತೆ ವಹಿಸಿದ್ದರು. ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಹಣಮಂತ್ರಾಯಗೌಡ ಪಾಟೀಲ, ಉಪ ಪ್ರಧಾನ ವ್ಯವಸ್ಥಾಪಕ ಜೆ.ಬಿ.ಪಾಟೀಲ, ನೋಡಲ್ ಅಧಿಕಾರಿ ಎನ್.ಜಿ.ಜನಿವಾರ, ನಿವೃತ್ತ ಪಿಡಿಸಿ ಅಧಿಕಾರಿ ಆರ್.ಎಂ.ಬಣಗಾರ, ಡೆಪ್ಯೂಟಿ ಮ್ಯಾನೇಜರ್ ಎಂ.ಎಸ್. ಹತ್ತರಕಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಮನವಿ

ಕಾರ್ಯಕ್ರಮದಲ್ಲಿ ಸಿಂದಗಿ ಶಾಸಕ ಅಶೋಕ ಮನಗೂಳಿ ಅವರು ಮಾತನಾಡಿ, ಪಟ್ಟಣದ ಈ ಸಹಕಾರ ಸಂಘವು ಇತಿಹಾಸ ಹೊಂದಿದ ಸಂಸ್ಥೆಯಾಗಿದೆ. ಶಿವಲಿಂಗರಾವ್ ದೇಶಮುಖ ಅವರು ಅಡಿಪಾಯ ಹಾಕಿಕೊಟ್ಟಿರುವುದಿರಂದ ಈ ಭಾಗದ ರೈತರಿಗೆ, ವ್ಯಾಪಾರಸ್ಥರಿಗೆ, ಕೂಲಿಕಾರರಿಗೆ ಅನುಕೂಲವಾಗಿದೆ. ಅದರೊಂದಿಗೆ ಅಧಿಕಾರಿಗಳು, ಸಿಬ್ಬಂದಿಗಳು ರೈತರೊಂದಿಗೆ ಹೊಂದಿದ ಉತ್ತಮ ಬಾಂಧವ್ಯದಿಂದ ಸಂಸ್ಥೆಗೆ ಬಲ ಬಂದಂತಾಗಿದೆ. ಕಟ್ಟಡಕ್ಕೆ ಸರ್ಕಾರದಿಂದ ಯಾವುದೇ ಧನ ಸಹಾಯ ಪಡೆಯದೇ ರೈತರ ವಂತಿಕೆಯಿಂದ ಕಟ್ಟಡ ನಿರ್ಮಿಸಿರುವುದು ಮಾದರಿಯಾಗಿದೆ ಎಂದು ಹೇಳಿದರು.

ತಾಲೂಕಿನಲ್ಲಿ 5 ಖಾಸಗಿ ಸಕ್ಕರೆ ಕಾರ್ಖಾನೆಗಳಿದ್ದು, ಈ ಭಾಗದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸಚಿವರಲ್ಲಿ ಅವರು ಮನವಿ ಮಾಡಿಕೊಂಡರು.



## ವಚನ ಚಿಂತನ 268

*ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ.*

*ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ,*
*ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ.*
*ನೀನು ಜಗಕ್ಕೆ ಬಲ್ಲಿದನು,*
*ಆನು ನಿನಗೆ ಬಲ್ಲಿದನು, ಕಂಡಯ್ಯಾ.*
*ಕರಿಯು ಕನ್ನಡಿಯೊಳಗಡಗಿದಂತಯ್ಯಾ,*
*ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.*
*– ಬಸವಣ್ಣನವರು*

ಜಗದ ಅಣುರೇಣು ತೃಣ-ಕಾಷ್ಟದಲ್ಲಿ ಅಡಗಿರುವ ಜಗದ ರಕ್ಷಕ ಕೂಡಲಸಂಗಮದೇವನ ಅರಿವು ಉಂಟಾದಾಗ ಜಗದ ಎಲ್ಲ ಚರಾಚರ ವಸ್ತು, ಜೀವಿಗಳಲ್ಲಿ ಕೂಡಲಸಂಗಮನ ಇರುವಿಕೆ ಕಂಡುಬರುವಲ್ಲಿ ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ, ಎನ್ನುವ ಭಾವ ಒಡಮೂಡುತ್ತದೆ, ಲಿಂಗಾನುಸಂದಾನದಲ್ಲಿ ಲಿಂಗವೇ ತಾನಾದ ಬಳಿಕ ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ. ಎನ್ನುವ ಭಾವ ಒಡಮೂಡುತ್ತದೆ. ಆಗ ಮಹಾಲಿಂಗವು ಜಗತ್ತನ್ನೆಲ್ಲ ಆವರಿಸಿದ್ದರೆ ತಾನೂ ಅವನನ್ನು ವ್ಯಾಪಿಸಿರುವ ಭಾವದಲ್ಲಿ ಅಂಗ ಲಿಂಗವಾಗಿ ಮಹಾಲಿಂಗದ ಅನುಭೂತಿಯನ್ನು ಪಡೆಯುತ್ತದೆ ಈ ಪ್ರಕ್ರೀಯೆಯು ಇಷ್ಟಲಿಂಗದ ಮೂಲಕ ನಡೆಯುವಾಗ ಸಾಧಕನಿಗೆ ಇಷ್ಟಲಿಂಗದಲ್ಲಿ ಮಹಾಲಿಂಗ ಕಂಡಪರಿಯು ಬೃಹದಾಕಾರದ ಆನೆಯು ಕನ್ನಡಿಯಲ್ಲಿ ಅಡಗಿ ಕಂಡ ಸೋಜಿಗ ವ್ಯಕ್ತವಾಗುತ್ತದೆ ಎಂದಿರುವರು ವಿಶ್ವಗುರು ಬಸವಣ್ಣನವರು..

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಸರ್ವ ರೀತಿಯಿಂದ ಸಿಂದಗಿ ಜಿಲ್ಲೆಯಾಗಲು ಮುಂದು :ಶಾಸಕ ಮನಗೂಳಿ

ಉದಯರಶ್ಮಿ ನ್ಯೂಸ್

ಸಿಂದಗಿ: ಕಂದಾಯ ಇಲಾಖೆಯ ಸೆಕ್ರೆಟೆಡ್ ಆಫೀಸಿನ ಉಲ್ಲೇಖದ ಮೇರೆಗೆ ಜಿಲ್ಲಾಧಿಕಾರಿಗಳ ಸೂಚನೆಯ ಮೇರೆಗೆ ಇಂಡಿ ತಾಲೂಕನ್ನು ಜಿಲ್ಲಾ ಕೇಂದ್ರವನ್ನಾಗಿಸಬೇಕೆನ್ನುವ ಜನಾಭಿಪ್ರಾಯ ಸಂಗ್ರಹ ಮಾಡಲು ಸಭೆ ಕರೆಯಲಾಗಿದೆ. ಅದಕ್ಕೆ ಸಾಧಕ ಬಾಧಕಗಳನ್ನು ಚರ್ಚಿಸಿ ಅಭಿಪ್ರಾಯ ಮಂಡಿಸಿ ಸರಕಾರಕ್ಕೆ ವರದಿ ಸಲ್ಲಿಸಲಾಗುವುದು. ಕಾರಣ ಜ.10ರ ಒಳಗಾಗಿ ಲಿಖಿತ ರೂಪದಲ್ಲಿ ಮನವಿ ಸಲ್ಲಿಸಬೇಕು ಎಂದು ಇಂಡಿ ಉಪವಿಭಾಗಾಧಿಕಾರಿ ಚಂದ್ರಕಾಂತ ಗದ್ಯಾಳ ಹೇಳಿದರು.

ಪಟ್ಟಣದ ತಾಪಂ ಸಭಾ ಭವನದಲ್ಲಿ ನಡೆದ ಇಂಡಿ ತಾಲೂಕನ್ನು ಜಿಲ್ಲಾ ಕೇಂದ್ರವನ್ನಾಗಿಸಲು ಕರೆದ ಜನಾಭಿಪ್ರಾಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಸಕ ಅಶೋಕ ಮನಗೂಳಿ ಮಾತನಾಡಿ, ಸರಕಾರದಿಂದ ಬಂದ ವರದಿಯ ಬಗ್ಗೆ ಯಾರಿಗೂ ಸಂಪರ್ಕ ಮಾಡಿಲ್ಲ. ಹಿಂದೆ ಅಖಂಡ ಜಿಲ್ಲೆಯಲ್ಲಿ 15 ತಾಲೂಕುಗಳಿದ್ದವು ಬಾಗಲಕೋಟ ಪ್ರತ್ಯೇಕ ಜಿಲ್ಲೆಯಾಗಿರುವುದರಿಂದ ಅಭಿವೃದ್ಧಿ ಕುಂಟಿತವಾಗಿತ್ತು ಜೆ.ಎಚ್.ಪಟೇಲ, ಎಚ್.ಡಿ.ಕುಮಾರಸ್ವಾಮಿಯವರು ಮತ್ತೆ ಹಲವು ತಾಲೂಕುಗಳನ್ನು ರಚನೆ ಮಾಡಿರುವುದರಿಂದ ಈ ಜಿಲ್ಲೆಗೆ 13 ತಾಲೂಕುಗಳಾಗಿವೆ ಇವುಗಳಲ್ಲಿ ನೀರಾವರಿ, ರಾಷ್ಟ್ರೀಯ ಹೆದ್ದಾರಿಯಿಂದ ನಾಲ್ಕು ರಾಜ್ಯಗಳ ಸಂಪರ್ಕಕೊಂಡಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ತುಲನಾತ್ಮವಾಗಿ ನೋಡಿದಾಗ ಎಲ್ಲ ತಾಲೂಕುಗಳಿಗಿಂತ ಸಿಂದಗಿ ತಾಲೂಕು ಮುಂದಿದೆ. ಅದಕ್ಕೆ ಎಸ್ಪಿ, ಡಿವೈಎಸ್ಪಿ, ಆರ್‌ಟಿಓ ಆಫೀಸ್‌ಗಳನ್ನು ಮಂಜೂರು ಮಾಡಬೇಕು ಎಂದು ಸರಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ. ಆ ಕಾರಣಕ್ಕೆ ಸಿಂದಗಿ ಜಿಲ್ಲೆಯಾಗುವುದರಲ್ಲಿ ಸಂದೇಹವಿಲ್ಲ ಎಂದು ಅಭಿಮತ ವ್ಯಕ್ತಪಡಿಸಿದರು.

ಮಾಜಿ ಶಾಸಕ ರಮೇಶ ಭೂಸನೂರ ಮಾತನಾಡಿ, ಈ ಹಿಂದೆ ಜಿಲ್ಲೆ, ತಾಲೂಕು ರಚನೆಯ ಮಾಡುವಲ್ಲಿ ನಂಜುಂಡಪ್ಪ ಸಮೀತಿ ವರದಿಯಂತೆ ಕೆಲವು ಮಹನೀಯರ ಸಮೀತಿಗಳ ವರದಿಗಳನ್ನು ಆಧಾರವಾಗಿಟ್ಟುಕೊಂಡು ಹಲವಾರು ಜನಾಭಿಪ್ರಾಯಗಳನ್ನು



ಕ್ರೋಡಿಕರಿಸಿ ಸರಕಾರ ಮಟ್ಟದಲ್ಲಿ ಚರ್ಚಿಸಿ ರಚನೆ ಮಾಡಿದ್ದಾರೆ. ಅದ್ಯಾವ ಸಮೀತಿಗಳ ವರದಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಒಮ್ಮೆಲೆ ಜಿಲ್ಲಾ ಕೇಂದ್ರವಾಗಿಸುವ ಅಭಿಪ್ರಾಯ ಕ್ರೋಡಿಕರಣಕ್ಕೆ ಮುಂದಾಗಿರುವುದು ಅಸಂವಿಧಾನಿಕವಾಗಿದೆ. ಪ್ರತ್ಯೇಕ ಜಿಲ್ಲೆ ಮಾಡಲು ಮುಂದಾದರೆ ಸಿಂದಗಿಯು ಭೌಗೋಳಿಕವಾಗಿ ಎಲ್ಲದರಲ್ಲಿಯೂ ಮುಂದಿದೆ. ಕಾರಣ ಸಿಂದಗಿಗೆ ಮೊದಲ ಆದ್ಯತೆ ನೀಡಬೇಕೆನ್ನುವ ಚರ್ಚಿತ ವರದಿಯನ್ನು ಸರಕಾರಕ್ಕೆ ಸಲ್ಲಿಸಬೇಕು ಎಂದರು.

ಮಾಜಿ ವಿಪ ಸದಸ್ಯ ಅರುಣ ಶಹಾಪುರ ಮಾತನಾಡಿ, ಈ ಹಿಂದೆ 4 ತಾಲೂಕುಗಳನ್ನು ಸೇರಿಸಿ ಜಿಲ್ಲೆ ಮಾಡಿದ ಉದಾಹರಣೆಯಿದೆ. ಈ ತಾಲೂಕಿನಿಂದ ಮೂರು ತಾಲೂಕುಗಳು ವಿಂಗಡಣೆಯಾಗಿವೆ. ಸಿಂದಗಿ, ಆಲಮೇಲ, ದೇವರ ಹಿಪ್ಪರಗಿ, ತಾಳಿಕೋಟಿ ನಾಲ್ಕು ತಾಲೂಕುಗಳು. ಇದು ತಾರ್ಕಿಕ ಹಂತದವರೆಗೆ ಹೋಗಲಿ. ಸಿಂದಗಿ ಅಭಿವೃದ್ಧಿ ಆಗುವವರೆಗೂ ನಾವ್ಯಾರೂ ನಿಲ್ಲುವುದು ಬೇಡ. ಸಿಂದಗಿ ಜಿಲ್ಲೆಯಾಗಬೇಕು ಎಂಬ ಕೂಗನ್ನು ಗಟ್ಟಿಯಾಗಿ ಧ್ವನಿ ಸರಕಾರಕ್ಕೆ ಮುಟ್ಟುವರೆಗೂ ನಡೆಯಬೇಕು ಎಂದು ಹೇಳಿದರು.

ಮಾಜಿ ಶಾಸಕ ಶರಣಪ್ಪ ಸುಣಗಾರ ಮಾತನಾಡಿ, ಸಿಂದಗಿ ಜನಸಂಖ್ಯೆಯಲ್ಲೂ ಸಿಂದಗಿ ಮುಂದಿದೆ. ವಿವಿಧ ತಾಲೂಕುಗಳನ್ನು ಪರಿಗಣಿಸಿದರೆ ಸಿಂದಗಿಯೇ ಪ್ರಮುಖ ಸ್ಥಾನದಲ್ಲಿದೆ. ಅದಕ್ಕೆ ಸಿಂದಗಿ ಜಿಲ್ಲೆಯಾಗುವ ಎಲ್ಲ ಅರ್ಹತೆಗಳಿವೆ ಎನ್ನುವ ವರದಿಗಳನ್ನು ಸರಕಾರಕ್ಕೆ ಮನವರಿಕೆ ಮಾಡುವ ನಿಟ್ಟಿನಲ್ಲಿ ಸಿಎಂ ಮತ್ತು ಡಿಸಿಎಂ ಅವರ ಮೇಲೆ ಒತ್ತಡ ತರುವ ಕಾರ್ಯ ನಾವೆಲ್ಲರೂ ಸೇರಿ ಮಾಡೋಣ ಎಂದರು.

ಈ ಸಂದರ್ಭದಲ್ಲಿ ಮಕ್ಕಳ ಸಾಹಿತಿ ಹ.ಮ.ಪೂಜಾರಿ, ಸಾಹಿತಿ ಡಾ.ಎಂ.ಎಂ.ಪಡಶೆಟ್ಟಿ, ವೈ.ಸಿ.ಮಯೂರ, ಡಾ.ದಸ್ತಗೀರ ಮುಲ್ಲಾ, ರಾಜಶೇಖರ ಕೂಚಬಾಳ, ಮಹಾಂತೇಶ ಪಟ್ಟಣಶೆಟ್ಟಿ, ಅಶೋಕ ಅಲ್ಲಾಪುರ, ಶಿಲ್ಪಾ ಕುದರಗೊಂಡ, ಸಂತೋಷ ಮಣಿಗೇರಿ, ಸಾಯಬಣ್ಣ ಪುರದಾಳ, ರಾಕೇಶ ಕಾಂಬಳೆ, ಅಶೋಕ ಸುಲ್ಪಿ ಸೇರಿದಂತೆ ಅನೇಕರು ಮಾತನಾಡಿ, ಸಿಂದಗಿ ತಾಲೂಕು ಜಿಲ್ಲೆಯಾಗುವ ಎಲ್ಲ ಲಕ್ಷಣಗಳಿವೆ. ಸಿಂದಗಿ ಜಿಲ್ಲೆಯನ್ನಾಗಿ ಮಾಡಲು ಬೆಂಗಳೂರು ಮಟ್ಟದವರೆಗೂ ಹೋರಾಟ ಮಾಡೋಣ. ಎಲ್ಲ ತಾಲೂಕುಗಳಿಗೂ ಹೋಗಿ ಅಭಿಪ್ರಾಯ ಸಂಗ್ರಹಣೆ ಮಾಡಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ತಹಶೀಲ್ದಾರ ಪ್ರದೀಪಕುಮಾರ ಹಿರೇಮಠ, ತಾಪಂ ಇಓ ರಾಮು ಅಗ್ನಿ, ಕಸಾಪ ಅಧ್ಯಕ್ಷ ಶಿವಾನಂದ ಬಡಾನೂರ, ಮಾಜಿ ಜಿಪಂ ಉಪಾಧ್ಯಕ್ಷ ಸಿದ್ದರಾಮ ಪಾಟೀಲ ವೇದಿಕೆ ಮೇಲಿದ್ದರು.

# ಬಿಎಲ್ಡಿಇ ವಿವಿಗೆ ಇಸ್ರೋ ಮಾಜಿ ಅಧ್ಯಕ್ಷ ಪ್ರೊ.ಕಿರಣಕುಮಾರ ಭೇಟಿ

ಉದಯರಶ್ಮಿ ನ್ಯೂಸ್

ವಿಜಯಪುರ: ಇಸ್ರೋ ಮಾಜಿ ಅಧ್ಯಕ್ಷ ಪ್ರೊ. ಎ. ಎಸ್. ಕಿರಣಕುಮಾರ ಅವರು ಇಂದು ಶನಿವಾರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದರು

ಈ ಸಂದರ್ಭದಲ್ಲಿ ಪ್ರೊ. ಎ. ಎಸ್. ಕಿರಣಕುಮಾರ ಅವರನ್ನು ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಸಮಕುಲಪತಿ ಡಾ. ಅರುಣ ಸಿ ಇನಾಮದಾರ, ಕುಲಸಚಿವ ಡಾ. ಆರ್. ವಿ. ಕುಲಕರ್ಣಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ವಿಶೇಷ ಉಪನ್ಯಾಸ ನೀಡಿದ ಪ್ರೊ. ಎ.ಎಸ್. ಕಿರಣಕುಮಾರ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಇತ್ತೀಚಿನ ಸಾಧನೆಗಳು, ಬಾಹ್ಯಾಕಾಶ ತಂತ್ರಜ್ಞಾನದಲ್ಲಿನ ನಡೆದಿರುವ ಪ್ರಗತಿ ಮತ್ತು ಭಾರತದ ಬಾಹ್ಯಾಕಾಶ ಪರಿಶೋಧನೆ ಪ್ರಯತ್ನಗಳ




ಭವಿಷ್ಯ ಪಥದ ಒಳನೋಟಗಳನ್ನು ಹಂಚಿಕೊಂಡರು. ಅಲ್ಲದೇ, ಬಾಹ್ಯಾಕಾಶ ಸಂಶೋಧನೆಯಲ್ಲಿನ ಅನ್ವೇಷಣೆಯ ಸಂದರ್ಭದಲ್ಲಿ ಇಸ್ರೋ ಎದುರಿಸಿದ ಸವಾಲುಗಳು ಮತ್ತು ಯಶಸ್ಸಿನ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಉಪಪ್ರಾಚಾರ್ಯ ಡಾ. ಎಂ. ಬಿ. ಪಾಟೀಲ, ಬಿ.ಎಲ್.ಡಿ.ಇ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಆರ್. ಬಿ. ಕೊಟ್ನಾಳ, ಉಪಕುಲಸಚಿವ ಸತೀಶ ಪಾಟೀಲ, ಕಾಲೇಜಿನ ನಾನಾ ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಕನ್ನಡ ನಾಮಫಲಕ ಹಾಕದಿದ್ದರೆ ಅಂಗಡಿ ಧ್ವಂಸದ ಎಚ್ಚರಿಕೆ!



**ಉದಯರಶ್ಮಿ ನ್ಯೂಸ್**

ಸಿಂದಗಿ: ಬೆಂಗಳೂರಲ್ಲಿ ನಡೆದ ಕರವೇ ಬ್ರಹತ್ ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ನಾರಾಯಣ ಗೌಡರನ್ನು ಹಾಗೂ ಎಲ್ಲ ಕರವೇ ಕಾರ್ಯಕರ್ತರನ್ನು ರಾಜ್ಯ ಸರಕಾರ ಬಂಧನ ಮಾಡಿಸಿದೆ. ಕರ್ನಾಟಕದಲ್ಲಿ ಕನ್ನಡಿಗನಿಗೆ ಮೊದಲ ಆದ್ಯತೆ ನೀಡಬೇಕು ಎಂದು ಕರವೇ ಉತ್ತರ ಕರ್ನಾಟಕ ಅಧ್ಯಕ್ಷ ಸಂತೋಷ್ ಡಂಬಳ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಸಿಂದಗಿ ತಾಲೂಕು ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಬೆಂಗಳೂರಲ್ಲಿ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡರನ್ನು ಬಂಧಿಸಿದನ್ನು ಖಂಡಿಸಿ ಪ್ರತಿಭಟಿಸಿ ಮಾತನಾಡಿದ ಅವರು, ನಾರಾಯಣಗೌಡರು ತಮ್ಮ ಯಾವುದೇ ಸ್ವಾರ್ಥಿಕ್ಕಾಗಿ ಹೋರಾಟ ಮಾಡಿಲ್ಲ. ಈ ಕನ್ನಡ ನಾಡಿನ ಮಣ್ಣಿಗಾಗಿ, ಕನ್ನಡದ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಕನ್ನಡದ ಉಳಿವಿಗಾಗಿ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಅವರನ್ನು ಬಂದಿಸಿದ ಮಾತ್ರಕ್ಕೆ ಕರವೇ ಹೋರಾಟ ನಿಲ್ಲುತ್ತದೆ ಎನ್ನುವುದು ನಿಮ್ಮ ಮುಟ್ಟಾಳತನ. ನಮ್ಮ ಹೋರಾಟ ಯಾವತ್ತೂ ನಿಲ್ಲುವುದಿಲ್ಲ. ಸಿಂದಗಿಯ ಅಂಗಡಿ ಮಾಲೀಕರಿಗೆ ಕಳೆದ ದಿನಗಳಲ್ಲಿ ಕನ್ನಡ ನಾಮಫಲಕ ಕುರಿತು ಜಾಗ್ರತಿ ಮೂಡಿಸಿದ್ದೇವೆ. ವಿಶೇಷವಾಗಿ ಮಾರ್ವಾಡಿಗಳು ಎಚ್ಚೆತ್ತುಕೊಂಡು ನಿಮ್ಮ ನಾಮ ಫಲಕಗಳನ್ನು ಬದಲಾಯಿಸಿ ಅಚ್ಚ ಕನ್ನಡದ ನಾಮ ಫಲಕಗಳನ್ನು ಅಳವಡಿಸಿ, ಇಲ್ಲವಾದಲ್ಲಿ ಖಂಡಿತವಾಗಿಯೂ ನಿಮ್ಮ ಅಂಗಡಿಗಳನ್ನು ಧ್ವಂಸಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರವಿಕಾಂತ ನಾಯ್ಕೋಡಿ, ಶ್ರೀಕಾಂತ ಬಿಜಾಪುರ, ಬಂಗಾರೆಪ್ಪಗೌಡ ಬಿರಾದಾರ, ಮಂಜು ಬಿಜಾಪುರ, ತನ್ವಿರ್ ಬೈರಾಮಡಗಿ, ಸಂದೀಪ ಚೌರ, ಮಹಾಂತೇಶ ಪರಗೊಂಡ, ಮಡಿವಾಳಪ್ಪಗೌಡ ಬಿರಾದಾರ, ಶ್ರೀಶೈಲ್ ಚೆಳ್ಳಗಿ, ಶ್ರೀಕಾಂತ ರಾಠೋಡ, ಅಂಬರೀಶ ಮಾರಾಲಬಾವಿ, ಸಂತೋಷ ಕ್ಷತ್ರಿ, ಗೊಲ್ಲಾಳ ಬ್ಯಾಕೋಡ, ಸಮೀರ್ ಪಟೇಲ್ ಸೇರಿದಂತೆ ಕಾರ್ಯಕರ್ತರು ಇದ್ದರು.

# ಬೇನಾಳ: ಗಣಿತ ಕಲಿಕಾ ಆಂದೋಲನ

**ಉದಯರಶ್ಮಿ ನ್ಯೂಸ್**



ಆಲಮಟ್ಟಿ: ಮಕ್ಕಳಲ್ಲಿ ಗಣಿತ ಕೌಶಲ್ಯ ಬೆಳೆಸಿ, ಮಕ್ಕಳಲ್ಲಿ ಸಾಮರ್ಥ್ಯವಾರು ಕಲಿಕಾ ಹಿಂದುಳಿಯುವಿಕೆಯನ್ನು ಗುರುತಿಸಲು ಗಣಿತ ಕಲಿಕಾ ಆಂದೋಲನದ ಸ್ಪರ್ಧೆಗಳು ಪೂರಕವಾಗಿವೆ ಎಂದು ನಿಡಗುಂದಿ ವಲಯದ ಶಿಕ್ಷಣ ಸಂಂ-ೋಜಕ ಉದಯಕುಮಾರ ಬಶೆಟ್ಟಿ ಅಭಿಪ್ರಾಯಪಟ್ಟರು.

ಸಮೀಪದ ಬೇನಾಳ ಆರ್. ಎಸ್. ಗ್ರಾಮದ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಅಕ್ಷರ ಫೌಂಡೇಶನ್ ಸಹಯೋಗದಲ್ಲಿ ಶುಕ್ರವಾರ ನಡೆದ ಬೇನಾಳ ಆರ್.ಸಿ. ಪಂಚಾಯ್ತಿ ಮಟ್ಟದ ಮಕ್ಕಳ ಗಣಿತ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಥಮಿಕ ಹಂತದಲ್ಲಿ ಸರಳ ಲೆಕ್ಕಾಚಾರ ಮಾಡಲು ಮಕ್ಕಳಲ್ಲಿ ಕಲಿಕೆ ಮಾಡಿಸುವುದು ಅಗತ್ಯ. ಅದಕ್ಕೆ ಪೂರಕವಾಗಿ ಈ ಗಣಿತ ಕಲಿಕಾ ಆಂದೋಲನ ನೆರವಾಗುತ್ತದೆ. ಮಕ್ಕಳಲ್ಲಿ ಗಣಿತ ಸ್ಪರ್ಧೆಯ ಮನೋಭಾವನೆ ಮೂಡಿಸಲಿದೆ ಎಂದರು.

ಸಮೂಹ ಸಂಪನ್ಮೂಲ ವ್ಯಕ್ತಿ ಸುರೇಶ ಹುರಕಡ್ಲಿ ಮಾತನಾಡಿ, 4,5 ಮತ್ತು 6 ನೇ ವರ್ಗದಲ್ಲಿ ಗಣಿತ ವಿಷಯದ ಕನಿಷ್ಠ ಕಲಿಕಾ ಮಟ್ಟದ 20 ಸಾಮರ್ಥ್ಯಗಳಿಗೆ ಅನುಗುಣವಾಗಿ ಪರೀಕ್ಷೆ ನಡೆಸಲಾಗುತ್ತಿದೆ. ಇದರಲ್ಲಿ ಮಕ್ಕಳ ನೈಜ ಪ್ರತಿಭೆ ಕಂಡುಹಿಡಿಯಲು ಸಾಧ್ಯವಾಗಲಿದೆ ಎಂದರು.

ಪಿಡಿಓ ಬಾದಶಹಾ ಖೀಜಿ, ಮುಖ್ಯ ಶಿಕ್ಷಕ ಹನುಮಂತಪ್ಪ ಇಲ್ಯಾಳ, ರವಿ ಬಿರಾದಾರ, ರಾಘವೇಂದ್ರ ವಂದಗನೂರ, ಚಂದ್ರಶೇಖರ ಕೋಳೇಕರ, ಉತ್ತಮ ಪತ್ತಾರ, ಎನ್.ಬಿ. ಭಜಂತ್ರಿ, ಎಸ್.ಡಿ. ಸಂತೇಪೂರ, ಗೀತಾ ಹತ್ತರಕಿಹಾಳ, ಪ್ರಭಾಕರ ಹೆಬ್ಬಾಳ, ಎನ್.ಬಿ. ದಾಸರ, ಜಿ.ಡಿ. ಆಸಂಗಿ, ಸೀತಾರಾಮ ರಾಠೋಡ, ಬೀಳೇಕುದರಿ ಇತರರು ಇದ್ದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮೊದಲ ಮೂರು ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

# ಡಿ.31ರಂದು ಆಧ್ಯಾತ್ಮಿಕ ಗ್ರಂಥ ಬಿಡುಗಡೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ತಾಲೂಕಿನ ಮಂಗಳೂರು ಗ್ರಾಮದಲ್ಲಿ ಶ್ರೀ ಸಮರ್ಥ ಸದ್ಗುರು ಭೀಮಾಶಂಕರ ಮಹಾರಾಜರ 69ನೆಯ ಪುಣ್ಯಾರಾಧನೆಯ ಪ್ರಯುಕ್ತ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಜರುಗಲಿದೆ.

ತಾಲೂಕಿನ ಮಂಗಳೂರು ಗ್ರಾಮದ ಶ್ರೀ ಸಮರ್ಥ ಸದ್ಗುರು ಭೀಮಾಶಂಕರ ಮಹಾರಾಜರ 69ನೇ ಪುಣ್ಯಾರಾಧನೆ ಪ್ರಯುಕ್ತ ನಿವೃತ್ತ ಶಿಕ್ಷಕ ವಿರೂಪಾಕ್ಷಪ್ಪ ಸಿಂಪಿ ರಚಿಸಿದ ಭವ ದಾಟುವ ದಾರಿ ಎಂಬ ಆಧ್ಯಾತ್ಮಿಕ ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು ಡಿ.31ರಂದು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರದ ದಿವ್ಯ ಸಾನಿಧ್ಯ ಯಂಕಂಚಿಯ ಹಿರೇಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ವಹಿಸುವರು. ಬಮ್ಮನಹಳ್ಳಿಯ ಶ್ರೀ ಸಮರ್ಥ ಸದ್ಗುರು ನರಸಿಂಹ ಮಹಾರಾಜರು ಅಧ್ಯಕ್ಷತೆ ವಹಿಸುವರು. ಮಂಗಳೂರಿನ ವೇ. ಮೂ. ಮಲ್ಲಯ್ಯ ಸಿದ್ದರಾಮಯ್ಯ ಹಿರೇಮಠ ಅವರು ಸಮ್ಮುಖ ವಹಿಸುವರು. ಘೋಡಗೇ-ರಿಯ ಶಿವಾನಂದ ಮಠದ ಮಲ್ಲಯ್ಯ ಸ್ವಾಮಿಗಳು ನೇತೃತ್ವ ವಹಿಸುವರು. ನ್ಯಾಯವಾದಿ ಎನ್.ಎಸ್. ಹಿರೇಮಠ ಗ್ರಂಥ ಬಿಡುಗಡೆ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕುಮಸಿಯ ಸದ್ಗುರು ರಘುನಾಥ್ ಭಟ್ ಜೋಶಿ, ವಿಠ್ಠಲ ಕೊಳ್ಳೂರ, ತದ್ದೇವಾಡಿಯ ಪುರಾಣ ಕೇಸರಿ ಮಹಾಂತೇಶ ಶಾಸ್ತ್ರಿಗಳು ಉಪಸ್ಥಿತರಿರುವರು.

ಕಾರಣ ಸುತ್ತಮುತ್ತಲಿನ ಗ್ರಾಮಸ್ಥರು ಗ್ರಂಥ ಲೋಕಾರ್ಪಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಗುರುವಿನ ಕೃಪೆಗೆ ಪಾತ್ರರಾಗಬೇಕೆಂದು ಜಾತ್ರಾ ಸಮಿತಿಯವರು ತಿಳಿಸಿದ್ದಾರೆ.

# ಮಂಚ್-ಮಚ್ಚಾ ಸ್ಪರ್ಧೆ: ಬಿ.ಎಂ.ಪಾಟೀಲ ಕಾಲೇಜ್ ತಂಡ ಚಾಂಪಿಯನ್

**ಉದಯರಶ್ಮಿ ನ್ಯೂಸ್**




ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ. ಎಸ್.ಪಿ. ಕಾಮರ್ಸ್ ಕಾಲೇಜಿನ ಬಿಬಿಎ ವಿಭಾಗ ಇಂದು ಶುಕ್ರವಾರ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿದ್ದ ಜಿಲ್ಲಾ ಮಟ್ಟದ ಮಂಚ್- ಮಚ್ಚಾ ವೃತ್ತಿಪರ ಸ್ಪರ್ಧೆಯಲ್ಲಿ ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ವಿಪ್ರೊ ತಂಡ ಸಮಗ್ರ ಚಾಂಪಿಯನ್ ಆಗಿ ಹೊರ ಹೊಮ್ಮಿದೆ.

ಬಿ.ಎಲ್.ಡಿ.ಇ ಸಂಸ್ಥೆಯ ಹೊಸ ಆವರಣದಲ್ಲಿರುವ ಬಿಬಿಎ ಕಾಲೇಜಿನಲ್ಲಿ ನಡೆದ ಈ ವೃತ್ತಿಪರ ಸ್ಪರ್ಧೆಯಲ್ಲಿ ಯಾರ್ಂಪ್ ವಾಕ್, ಟೀಮ್ ಬಿಲ್ಡಿಂಗ್, ರಸಪ್ರಶ್ನೆ, ಅಡುಗೆ, ಛಾಯಾಚಿತ್ರ ಸ್ಪರ್ಧೆಗಳು ನಡೆದವು.

ಜಿಲ್ಲೆಯ ನಾನಾ ಭಾಗಗಳಿಂದ 29 ಪಿಯು ಕಾಲೇಜುಗಳ ಸುಮಾರು 500 ಜನ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಂಡರು.

ಒಟ್ಟು ಐದು ವಿಭಾಗಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವ-ರಿಗೆ ಬಹುಮಾನ ವಿತರಿಸಲಾಯಿತು. ಪ್ರಥಮ ಸ್ಥಾನ ಪಡೆದವರಿಗೆ ರೂ. 2000 ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳಿಗೆ ರೂ.1000 ನಗದು ಬಹುಮಾನ ನೀಡಲಾಯಿತು. ಈ ಸ್ಪರ್ಧೆಗಳಲ್ಲಿ ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜು ಮತ್ತು ಎ.ಎಸ್.ಪಾಟೀಲ ಕಾಮರ್ಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ಬಹುತೇಕ ಸ್ಪರ್ಧೆಗಳಲ್ಲಿ ಜಯಗಳಿಸಿದರು. ಪ್ರತಿಯೊಂದು ಕಾಲೇಜಿನಲ್ಲಿ ತಲಾ ಎರಡು ಮತ್ತು ಅದಕ್ಕಿಂತಲೂ ಹೆಚ್ಚು ತಂಡಗಳು ಭಾಗವಹಿಸಿದ ಹಿನ್ನೆಲೆಯಲ್ಲಿ ಒಂದೊಂದು ತಂಡಕ್ಕೆ ಒಂದೊಂದು ಹೆಸರಾಂತ ಸಂಸ್ಥೆಗಳ ಹೆಸರುಗಳನ್ನು ನೀಡಲಾಗಿತ್ತು. ಈ ತಂಡಗಳಲ್ಲಿ ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ವಿಪ್ರೊ ತಂಡ ತಲಾ ಎರಡು ವಿಭಾಗಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದು ಸಮಗ್ರ ಚಾಂಪಿಯನ್ ಆಗಿ ಹೊರ ಹೊಮ್ಮಿತು.

ಸಂಜೆ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಎ.ಎಸ್. ಪಾಟೀಲ ಕಾಮರ್ಸ್ ಕಾಲೇಜಿನ ಎಂಬಿಎ ವಿಭಾಗದ ನಿರ್ದೇಶಕ ಡಾ. ಚಿದಾನಂದ ಬ್ಯಾಹಟ್ಟಿ, ಸಹಾಯಕ ಪ್ರಾಧ್ಯಾಪಕರಾದ ಲಕ್ಷ್ಮಣ ಪವಾರ ಮತ್ತು ವರ್ಷಾ ದೇಸಾಯಿ, ಗಂಗಾಧರ ಮಮದಾಪುರ ಪ್ರಶಸ್ತಿ ಪ್ರಧಾನ ಮಾಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಡಾ. ಅಶ್ವಿನಿ ಯರನಾಳ, ಡಾ. ಮುರಗೇಶ ಪಟ್ಟಣಶೆಟ್ಟಿ, ಮಹಾಂತೇಶ ಕನಮಡಿ, ವಿನಯ ಡರ್ಬಿ, ರವಿ ಚವ್ಹಾಣ, ಎಸ್. ಬಿ. ಆರ್ಟ್ಸ್ ಮತ್ತು ಕೆಸಿಪಿ ಸಾಯಿನ್ಸ್ ಕಾಲೇಜಿನ ಡಾ. ಎಸ್. ಬಿ. ಭೈರವಾಡಗಿ, ಎಸ್. ಜಿ. ಜೋಶಿ, ಎಸ್. ವಿ. ವಂಬಾಸೆ ಮುಂತಾದವರು ಉಪಸ್ಥಿತರಿದ್ದರು.

ಸ್ಪರ್ಧೆಗಳು ಮತ್ತು ವಿಜೇತ ತಂಡಗಳ ಹೆಸರುಗಳು ಇಂತಿವೆ.

1..ಟೀಮ್ ಬಿಲ್ಡಿಂಗ್(ಒಗ್ಗಟ್ಟಿನಲ್ಲಿ ಬಲವಿದೆ): ಎಸ್.ಎಸ್. ಪಾಟೀಲ ಕಾಮರ್ಸ್ ಪಿಯು ಕಾಲೇಜಿನ ರಿಲಾಯನ್ಸ್ ತಂಡ(ಪ್ರಥಮ), ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ಬಿಪಿಸಿಎಲ್ ತಂಡ(ದ್ವಿತೀಯ)

2.ಕ್ವಿಜ್(ವಿಚಾರ ವಿಸ್ಪೋಟ್): ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ವಿಪ್ರೊ(ಪ್ರಥಮ), ಎ.ಎಸ್. ಪಾಟೀಲ ಕಾಮರ್ಸ್ ಪಿಯು ಕಾಲೇಜಿನ ಇನಫೋಸಿಸ್ ತಂಡ(ದ್ವಿತೀಯ)

3. ಕುಕ್ಕಿಂಗ್(ಆಹಾರ ಅನುಭವ): ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ಮಹಿಂದ್ರಾ □□□ಂಡ್ ಮಹಿಂದ್ರಾ ತಂಡ(ಪ್ರಥಮ), ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ವಿಪ್ರೊ ತಂಡ(ದ್ವಿತೀಯ)

4. ಫೋಟೋ ಮತ್ತು ವಿಡಿಯೋಗ್ರಾಫಿ(ಕ್ಷಣಗಳ ಕಥೆಗಳು): ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ಬಿಪಿಸಿಎಲ್ ತಂಡ(ಪ್ರಥ-ಮ), ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ವಿಪ್ರೊ ತಂಡ(ದ್ವಿತೀಯ)

5. ಯಾರ್ಂಪ್ ವಾಕ್(ನೋಡಿ ಸ್ವಾಮಿ ನಾವಿರೋದು ಹೀಗೆ): ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ವಿಪ್ರೊ ತಂಡ(ಪ್ರಥಮ), ಶ್ರೀ ಬಿ. ಎಂ. ಪಾಟೀಲ ಪಿಯು ಕಾಲೇಜಿನ ಆದಿತ್ಯ ಬಿರ್ಲಾ ತಂಡ(ದ್ವಿತೀಯ).

# ಸಿದ್ದೇಶ್ವರ ಶ್ರೀ ಸನ್ಮಾರ್ಗ ತೋರುವ ದಾರಿದೀಪ :ಸಿದ್ದರಾಮೇಶ್ವರ ಶ್ರೀ

**ಉದಯರಶ್ಮಿ ನ್ಯೂಸ್**



ವಿಜಯಪುರ: ವೇದಗಳ ಸಾರವನ್ನು, ಬಸವಾದಿ ಶರಣರ ವಚನಗಳ ಆಶಯವನ್ನು ಕಥೆಗಳ ಮೂಲಕ ವಿವರಿಸಿ ಮಹಾನ್ ಉದಾತ್ತ ಚಿಂತನೆಗಳು, ಆದರ್ಶಗಳು ಮನಸಿಗೆ ನಾಟುವಂತೆ ಮಾಡುವ ಅದ್ಭುತ ಶಕ್ತಿ ಶ್ರೀಗಳಲ್ಲಿತ್ತು ಎಂದು

ಭಾಲ್ಕಿಯ ಗೋರಚಿಂಚೋಲಿ ಮಠದ ಸಿದ್ದರಾಮೇಶ್ವರ ಪಟ್ಟದೇವರು ಹೇಳಿದರು.

ಅವರು ತಾಲೂಕಿನ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಸಂಜೆ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಗುರುನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವದ ವಿವಿಧ ದಾರ್ಶನಿಕರ ದರ್ಶನ, ಚಿಂತಕರ ಉದಾತ್ತ ಚಿಂತನೆಗಳನ್ನು ಸುಲಲಿತವಾಗಿ ಹೇಳುವ ಪೂಜ್ಯರು ಸಾಧಕರಿಗೆ ಸನ್ಮಾರ್ಗ ತೋರುವ ದಾರಿದೀಪವಾಗಿದ್ದರು ಎಂದು ಹೇಳಿದರು.

ನಾಗಠಾಣದ ಕಲ್ಲಯಾರೂಢ ಮಠದ ಪ್ರಜ್ಞಾನಂದ ಸ್ವಾಮೀಜಿ ಮಾತನಾಡಿ, ಆಡುಭಾಷೆಯಲ್ಲಿ, ಅತ್ಯಂತ ಸ್ಪಷ್ಟ ಉಚ್ಚಾರಣೆಯಲ್ಲಿ ಪ್ರವಚನ ನೀಡುತ್ತಿದ್ದ ಸಿದ್ದೇ□ಶ್ವರರು ಭಕ್ತರು ತಲ್ಲಿ□ನರಾಗುವಂತೆ ಮಾಡುತ್ತಿದ್ದರು. ಸಾಕ್ಷಾತ್ ದೈವಸ್ವರೂಪ, ಶಾಂತಸ್ವರೂಪರಾಗಿದ್ದ ಅವರ ಸಂದೇಶವನ್ನು ಪಾಲಿಸಿ ದಿವ್ಯ ಬದುಕನ್ನು ಸಾಗಿಸೋಣ ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ,ಸರಳ, ಮೃದು ಸ್ವಭಾವದ ಸಾತ್ವಿಕ ಜೀವನವೇ ಶ್ರೀಗಳ ಆದರ್ಶ.

ಅವರ ಜ್ಞಾನದಾಸೋಹದ ಪ್ರವಚನಗಳು ಮನದ ಅಂಧಕಾರವನ್ನು ನಿವಾರಿಸಿ ವಿಶ್ವಪ್ರೇ□ಮತ್ವ, ನಿಸರ್ಗ ಸೌಂದರ್ಯ ಆಸ್ವಾದಿಸುವ ಗುಣ ಹಾಗೂ ಎಲ್ಲ ಧರ್ಮಗಳ ಸಾರ ತಿಳಿದುಕೊಂಡು ಮಾನವನಾಗಲು ಸಹಕಾರವಾಗಿವೆ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಶಂಕರ ಹುಣಶ್ಯಾಳ ಅಧ್ಯಕ್ಷತೆ ವಹಿಸಿದ್ದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಿದ್ದೇಶ್ವರ ಶ್ರೀಗಳ ಭಾವಚಿತ್ರ ಮೆರವಣಿಗೆಯ ಜೊತೆಗೆ ಮಕ್ಕಳು ಪುಸ್ತಕದ ಕಟ್ಟುಗಳನ್ನು ತಲೆಯ ಮೇಲೆ ಹೊತ್ತು ಸಾಗಿದ್ದು ವಿಶೇಷವಾಗಿತ್ತು.

ಶಾಲಾ ಮುಖ್ಯ ಶಿಕ್ಷಕ ಸುರೇಶಗೌಡ ಬಿರಾದಾರ,

ಸಂಸ್ಥೆಯ ಕಾರ್ಯದರ್ಶಿ ಸುನಂದಾ ಹುಣಶ್ಯಾಳ, ಶಿಕ್ಷಕರಾದ ಎಂ ಎಸ್ ಪಾಪನಾಳಮಠ, ರಾಘವೇಂದ್ರ ಮೊಗಳ, ಭೀಮಾಶಂಕರ ಕೋರೆ,-ಜಯಶ್ರೀ ಬಂಗಾರಿ, ಬಸಮ್ಮ ವಡಗೇ-ರಿ,ರೂಪಾ ಶಹಾಪುರ, ಮಧುಮತಿ ನಿಕ್ಕಂ,

ಸರೋಜಿನಿ ಕಟ್ಟಿಮನಿ, ಲಕ್ಷ್ಮೀ ಮೇತ್ರಿ,ರೇಣುಕಾ ಭಜಂತ್ರಿ, ವೀರೇಶ ಹುಣಶ್ಯಾಳ ಸೇರಿದಂತೆ ಗ್ರಾಮಸ್ಥರು, ಶಾಲಾ ಮಕ್ಕಳು ಭಾಗವಹಿಸಿದ್ದರು.

# ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಯಭೇರಿ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಜಿದ್ದಾ ಜಿದ್ದಿಯಿಂದ ಕೂಡಿದ್ದ ಇಲ್ಲಿನ 18 ನೇ ವಾರ್ಡ್ ನ ಉಪಚುನಾವಣೆಗೆ ಶನಿವಾರ ತೆರೆ ಬಿದ್ದಿದೆ.

ಅಲ್ಲಾಭಕ್ಷ ಢವಳಗಿ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಒಟ್ಟು 6 ಜನ ಸ್ಪರ್ದಿಸಿದ್ದು ಡಿ.27 ರಂದು ಮತದಾನ ನಡೆದಿದ್ದು ಒಟ್ಟು 826 ಮತಗಳು ಚಲಾವಣೆಗೊಂಡಿದ್ದವು.

ಶನಿವಾರ ಬೆಳಿಗ್ಗೆ 8:30 ರ ಹೊತ್ತಿಗೆ ಮತ ಎಣಿಕೆ ಕಾರ್ಯ ಮುಕ್ತಾಯವಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶಾಹಿರಾಬಾನು ಅಲ್ಲಾಭಕ್ಷ ಢವಳಗಿ ಅವರು ವಿಜಯದ ಮಾಲೆ ಧರಿಸಿದರು.

ಫಲಿತಾಂಶ ಹೊರಬೀಳುತ್ತಿದ್ದಂತೆಯೇ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು ಸದಸ್ಯರು ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಪುರಸಭೆ ಸದಸ್ಯ ಮಹೆಬೂಬ ಗೊಳಸಂಗಿ, ರಿಯಾಜ ಢವಳಗಿ, ಯುವ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದರಫೀಕ ಶಿರೋಳ, ದಾವಲ ಗೊಳಸಂಗಿ, ಬಾಪ್ ಢವಳಗಿ ಸೇರಿದಂತೆ ಮತ್ತೀತರರು ಇದ್ದರು.

ಮತಗಳ ವಿವರ ಹೀಗಿದೆ : ದಯಾರಾಮ್‌ಸಿಂಗ್ ರಾಯಚೂರ – 61,ೂರ್‌ಅಹಮ್ಮದ ಶಿವಣಗಿ – 23, ಲಾಳೇಮಶ್ಯಾಕ ನಾಯ್ಕೋಡಿ(ಬುಡ್ಡಾ) – 48, ಶಾಹಿರಾಬಾನು ಢವಳಗಿ – 454, ಮೊಹಮ್ಮದ ಹುಣಚಗಿ – 18, ಅಬ್ದುಲಅಜೀಜ ಢವಳಗಿ – 217, ನೋಟಾ – 5

# ಸಿದ್ದೇಶ್ವರ ಶ್ರೀಗಳ ತತ್ವಾದರ್ಶ ಅಳವಡಿಸಿಕೊಳ್ಳಿ :ಜುನಗೊಂಡ

**ಉದಯರಶ್ಮಿ ನ್ಯೂಸ್**



ವಿಜಯಪುರ: ಶ್ರೇಷ್ಠ ಸಂತ ಸಿದ್ದೇಶ್ವರ ಸ್ವಾಮೀಜಿಯುವರ ಜೀವನವೇ ಒಂದು ಮಾದ-ರಿಯಾಗಿದ್ದು, ನುಡಿದಂತೆ ನಡೆದ ಮಹಾನುಭವಿಯಾಗಿದ್ದಾರೆ. ಇಂತಹ ಮಹಾನ್ ಚೇತನರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜೀವನ ಪಾವನಗೊಳಿಸಿಕೊಳ್ಳೋಣ ಎಂದು ಶ್ರೇಷ್ಠ ವಾಗ್ಮಿ, ಉಪನ್ಯಾಸಕ, ಸಾಹಿತಿ ಮಂಜುನಾಥ ಜುನಗೊಂಡ ಹೇಳಿದರು.

ಶನಿವಾರ ನಗರದ ಜಲನಗರ ಸರಕಾರಿ ಪ್ರೌಢಶಾಲಾ ಆವರಣದಲ್ಲಿ ಅಮ್ಮ ಫೌಂಡೇಶನ್ ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಸಿದ್ದೇಶ್ವರ ಶ್ರೀಗಳ ಗುರುನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಿದ ಅವರು, ಸಿದ್ದೇಶ್ವರ ಶ್ರೀಗಳು ಶ್ರೇಷ್ಠ ತತ್ವಜ್ಞಾನಿಯಾಗಿದ್ದು, ಆಡಂಬರ ಜೀವನಕ್ಕೆ ತಿಲಾಂಜಲಿ ನೀಡಿದ್ದರು. ಎಲ್ಲವೂ ಬೇಡ ಎನ್ನುತ್ತಲೇ ಅತ್ಯಂತ ಸಾದಾ ಜೀವನ ಸಾಗಿಸಿ ಮಾದ-ರಿಯಾಗಿದ್ದಾರೆ. ಅವರ ಪ್ರತಿಯೊಂದು ಆಚಾರ ವಿಚಾರ, ನಡೆ ನುಡಿ, ತತ್ವಗಳ ಮಾನವಕುಲಕ್ಕೆ ಮಾದರಿಯಾಗಿವೆ. ಪ್ರಮುಖವಾಗಿ ಹೇಳಿದ, ನಿಸರ್ಗಪ್ರೀತಿ, ತತ್ವಜ್ಞಾನ, ರೈತ, ಸೈನಿಕ, ಶಿಕ್ಷಕ ಇವರನ್ನು ಗೌರವಿಸಬೇಕು. ಶಿಕ್ಷಣದ ಜೊತೆಗೆ ಸಂಸ್ಕಾರವೂ ನೀಡಬೇಕು. ಭಾವಿ ಭವಿಷ್ಯತ್ತು ಸುಂದರವಾಗಿರಲು ಶ್ರೀಗಳ ವಾಣಿ ಅಳವಡಿಸಿಕೊಳ್ಳಬೇಕು. ಶ್ರೀಗಳಿಗೆ ಗುರುನಮನ ಸಲ್ಲಿಸುವುದರ ಜೊತೆಗೆ ನುಡಿದಂತೆ ನಡೆಯೋಣ, ಶ್ರೀಗಳ ವಾಣಿ ಜೀವಂತವಾಗಿರಿಸೋಣ ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮಹಾನಗರ ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಮಾತನಾಡಿ, ಸಿದ್ದೇಶ್ವರ ಶ್ರೀಗಳು ನಿಸರ್ಗಪ್ರೇಮಿಯಾಗಿದ್ದರು. ಗಿಡಮರಗಳನ್ನು ಬೆಳೆಸುವುದರಲ್ಲಿ ಆಸಕ್ತಿ ತೋರುತ್ತಿದ್ದು, ಅವರ ಕೃಪಾಶೀರ್ವಾದದಿಂದ ಡೊಮನಾಳ ಗ್ರಾಮದ ಗುಡ್ಡದಲ್ಲಿ 10ಸಾವಿರ ಗಿಡಗಳನ್ನು ಬೆಳೆಸಿ ಪೋಷಿಸಲಾಗುತ್ತಿದೆ. ನಾವೆಲ್ಲ ಅವರ ಆಶಯದಂತೆ ಜೀವನ ಸಾಗಿಸೋಣ ಮುಂದಿನ ಜನಾಂಗಕ್ಕೂ ಅವರ ತತ್ವಗಳನ್ನು ಕೊಂಡೊಯ್ಯೋಣ ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಸಿದ್ದನಗೌಡ ಬಿರಾದಾರ ಹಾಗೂ ವಿರೇಶ ಮಾಶಟ್ಟಿ ಮಾತನಾಡಿದರು.

ಕಾರ್ಯಕ್ರಮ ಸಂಘಟಕ ಶಿಕ್ಷಕ ಕಬೂಲ್ ಕೊಕಟನೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎ ಆರ್ ದಶವಂತ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ತನು ಫೌಂಡೇಶನ್ ಅಧ್ಯಕ್ಷ ವಿಜುಗೌಡ ಕಾಳಶೆಟ್ಟಿ, ಶಿಕ್ಷಣ ಸಂಯೋಜಕಿ ಪಿ ಜಿ ಹಿರೇಮಠ, ಸಂಪನ್ಮೂಲ ವ್ಯಕ್ತಿ ಪರವೀನ ದ್ಯಾವಾಪೂರ, ಮುಖ್ಯ ಗುರುಮಾತೆ ವ್ಹಿ ಎಸ್ ಓತಿಹಾಳ, ಟಿ ಸಿ ನಾಟೀಕಾರ, ಎಸ್ ಬಿ ಮಾಲಿಪಾಟೀಲ, ಎಸ್ ಬಿ ಗೆಜ್ಜಲಕಟ್ಟಿ, ಕೆ ಬಿ ಅವಟಗೇರ, ಜೆ ಎಸ್ ಜಾಲವಾದಿ, ಯುವ ಮುಖಂಡ ಅವಿನಾಶ ಸೇರಿದಂತೆ ಮತ್ತಿತರರಿದ್ದರು.

ಸಿದ್ದೇಶ್ವರ ಸ್ವಾಮೀಜಿ ಗುರುನಮನ ಮಹೋತ್ಸವದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಮತ

# ಸರ್ವರಿಗೂ ಜ್ಞಾನದ ಬೆಳಕು ನೀಡಿದ ಸಿದ್ಧೇಶ್ವರ ಶ್ರೀ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜ್ಯೋತಿ ತಾನು ಯಾವಾಗಲೂ ಪರರಿಗೆ ಬೆಳಕು ನೀಡುತ್ತದೆ. ಅದರಂತೆ ಇಡೀ ಜಗತ್ತಿನಾದ್ಯಂತ ತನ್ನ ಭಕ್ತ ಸಂಕುಲಕ್ಕೆ ಜ್ಞಾನದ ಜ್ಯೋತಿಯನ್ನು ನೀಡಿದಂತವರು ಶ್ರೀ ಸಿದ್ಧೇಶ್ವರ ಅಪ್ಪನವರು ಎಂದು ಶಾಸಕ ಬಿ. ವೈ. ವಿಜಯೇಂದ್ರ ಹೇಳಿದರು.

ನಗರದ ಜ್ಞಾನಯೋಗಾಶ್ರಮದ ಜ್ಞಾನಯೋಗಿ ಸಿದ್ದೇಶ್ವರ ಮಹಾಸ್ವಾಮಿಗಳವರ ಗುರುನಮನ ಮಹೋತ್ಸವ ಅಂಗವಾಗಿ "ಶಿಕ್ಷಣ ಹಾಗೂ ವಿಜ್ಞಾನ" ಎಂಬ ವಿಷಯದ ಕುರಿತು ಹಮ್ಮಿಕೊಂಡಿದ್ದ 8ನೇ ಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸೃಷ್ಠಿಯಲ್ಲಿ ಭೂಮಿ ಬಹಳ ವಿಶಿಷ್ಟವಾದಂತದ್ದು. ಈ ಭೂಮಿಯ ಮೇಲೆ ಅನೇಕ ಜೀವ ಸಂಕುಲಗಳು ಹುಟ್ಟಿ ಜನ್ಮ ತಾಳುತ್ತವೆ. ಮಾನವ ಜನ್ಮ ದೊಡ್ಡದು ಎಂದು ದಾಸರ ಪದಗಳಲ್ಲಿ ನಾವು ಕಾಣುತ್ತೇವೆ. ಇಂತಹ ಭೂಮಿಯ ಮೇಲೆ ಕೆಲವೇ ಕೆಲವು ಶ್ರೇಷ್ಠ ಶಕ್ತಿಗಳು, ಹುಟ್ಟುತ್ತಾರೆ ಅದರಂತೆ ಈ ನಾಡಿನ ಮತ್ತು ಜಗತ್ತಿನ ಕೋಟ್ಯಾಂತರ ಜನಕ್ಕೆ ಜ್ಞಾನದ ಬೆಳಕು ನೀಡಿದಂತಹ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಅಪ್ಪನವರೂ ಸಹ ಒಬ್ಬರು ಎಂದು ಹೇಳಿದರು.



ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಮಾತನಾಡಿ, ಶ್ರೀ ಸಿದ್ಧೇಶ್ವರ ಅಪ್ಪನವರ ಪ್ರವಚನವನ್ನು ಕೇಳದೆ ಇರುವ ವ್ಯಕ್ತಿಗಳು ಯಾರು ಇಲ್ಲ ಅವರು ಭೌತಿಕವಾಗಿ ನಮ್ಮ ಜೊತೆಯಿಲ್ಲ ಆದರೆ ನಮ್ಮ ಹೃದಯದಲ್ಲಿ ಸದಾ ಜೀವಂತವಾಗಿದ್ದಾರೆ ಎಂದರು.

ನಾನು ಒಮ್ಮೆ ಆಸ್ಟ್ರೇಲಿಯಾಗೆ ಹೋದಾಗ ಅವರ ಪ್ರವಚನಕ್ಕೆ ಹೋಗಿದ್ದೆ. ಅಲ್ಲಿ ಸುಮಾರು ಐದು ಸಾವಿರ ಜನ ಅವರ ಮಾತುಗಳನ್ನು ಕೇಳಲು ಬಂದಿದ್ದು ನನ್ನಲ್ಲಿ ಆಶ್ಚರ್ಯವನ್ನುಂಟು ಮಾಡಿತ್ತು. ನಮ್ಮ ದೇಶ ಮಾತ್ರವಲ್ಲ ಬೇರೆ ದೇಶಗಳಲ್ಲಿಯೂ ಅವರ ಪ್ರಭಾವ ಸಾಕಷ್ಟಿದೆ. ಅಂತಹ ಏನನ್ನು ಯಾ-ರಿಂದಲೂ ನಿರೀಕ್ಷೆ ಮಾಡದೆಯೇ ಬದುಕಿ, ಅತ್ಯಂತ ಸರಳ ಸಜ್ಜನಿಕೆಯಿಂದ ಬದುಕಿ ಇಡೀ ಜಗತ್ತಿಗೆ ಜ್ಞಾನ ದಾಸೋಹ ಮಾಡಿದ ಶ್ರೀ ಸಿದ್ಧೇಶ್ವರ ಅಪ್ಪನವರು ನಮ್ಮನ್ನು ಅಗಲಿದ ಮೇಲೆಯೂ ಇಂದಿಗೂ ನಮ್ಮಲ್ಲಿಯೇ ಆಳವಾಗಿ ಉಳಿದುಕೊಂಡಿದ್ದಾರೆ. ಅವರ ತತ್ವಗಳನ್ನು ಪಾಲಿಸುವ ಮೂಲಕ, ಅವರು ಕಲಿಸಿದ ಪಾಠಗಳನ್ನು, ಅವರ ಹಾದಿಯಲ್ಲಿ ನಾವು ಸಾಗುವ ಮೂಲಕ ಅವರಿಗೆ ಗುರು ನಮನ ಸಲ್ಲಿಸಬೇಕಾಗಿದೆ ಎಂದರು.

ಮಾಜಿ ಕೈಗಾರಿಕೆ ಸಚಿವ ಮುರಗೇಶ ನಿರಾಣಿ ಮಾತನಾಡಿ, ವಿಜಯಪುರ ಎಂದರೆ ಇಂದು ಜ್ಞಾನಯೋಗಾಶ್ರಮ ಎನ್ನುವಷ್ಟರ ಮಟ್ಟಿಗೆ ಸಿದ್ಧೇಶ್ವರ ಸ್ವಾಮೀಜಿ ಪ್ರಭಾವಿಸಿದ್ದಾರೆ. ಅವರಂತೆ ಬೇರೆ ಯಾರೂ ಆಗಲೂ ಸಾಧ್ಯವಿಲ್ಲ. ಒಬ್ಬ ಸಂತನಾಗಿ ಯಾವ ರೀತಿ ಇರಬೇಕು ಮತ್ತು ನಮ್ಮ ಜೀವನದಲ್ಲಿ ನಾವು ಹೇಗೆ ಬದುಕಬೇಕು ಎನ್ನುವುದನ್ನು ಶ್ರೀಗಳು ನಮ್ಮೆಲ್ಲರಿಗೂ ಕಲಿಸಿಕೊಟ್ಟು ಹೋಗಿದ್ದಾರೆ ಅವರು ಕಲಿಸಿದಂತೆ ನಾವು ಬದುಕಿದರೆ ಸಾಕು ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದರು.

ದೆಹಲಿ ಅಖಿಲ ಭಾರತೀಯ ಶಿಕ್ಷಣ ಮಂಡಳಿಯ ಪ್ರಧಾನ ಕಾರ್ಯದರ್ಶಿ ಶಂಕರಾನಂದ ಅನುಭಾವದ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಇಸ್ರೋ ಮಾಜಿ ಅಧಕ್ಷ ಪದ್ಮಶ್ರೀ ಎ. ಎಸ್. ಕಿರಣ ಕುಮಾರ ತಮ್ಮ ಅನುಭಾವದ ನುಡಿಗಳನ್ನಾಡಿ, ನಮ್ಮ ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ಸಾಕಷ್ಟು ಉಪಯೋಗಗಳಾಗುತ್ತಿವೆ ಎಂದರು.

ಸಿಂದಗಿ ಸಾರಂಗ ಮಠದ ಷ. ಬ್ರ ಪ್ರಭುಸಾರಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನುಡಿಗಳನ್ನಾಡಿದರು.

ಜ್ಞಾನಯೋಗಾಶ್ರಮದ ಅಧ್ಯಕ್ಷ ಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಎ. ಎಸ್. ಕಿರಣ ಕುಮಾರ "ಗುರುವೇ ದೇವರು" ಪುಸ್ತಕ ಬಿಡುಗಡೆ ಮಾಡಿದರು.

ಕಾರ್ಯಕ್ರಮಕ್ಕೂ ಮುನ್ನ ವಿದ್ಯಾನಂದ ಸ್ವಾಮೀಜಿ ಪ್ರಾರ್ಥನೆ ಹಾಡಿದರು. ವಿಜಯಪುರದ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಬಸವರಾಜ ಕವಲಗಿ ಸ್ವಾಗತಿಸಿ, ಪರಿಚಯಿಸಿದರು, ಹರ್ಷಾನಂದ ಸ್ವಾಮೀಜಿ ನಿರೂಪಿಸಿದರು.

## ದೇವಾಂಗ ಸಮಾಜದ ಸಂಘಟನಾ ಸಭೆ ಇಂದು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಡಿ.31 ರಂದು ಬೆಳಗ್ಗೆ 10.30ಕ್ಕೆ ಪಟ್ಟಣದ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ದೇವಾಂಗ ಸಮಾಜದ

ಸಮಾಜದ ಸಂಘಟನಾ ಸಭೆ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ದೇವಾಂಗ ಸಂಘದ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಆಯ್ಕೆಗಾಗಿ ಈ ಸಭೆಗೆ ಹಮ್ಮಿಕೊಂಡಿದ್ದು ಜಿಲ್ಲಾಧ್ಯಕ್ಷ ಬಸವರಾಜ ಚಿತ್ತರಗಿ, ಹಂಪಿ ಶ್ರೀ ಗಾಯತ್ರಿ ಪೀಠ ಮಹಾಸಂಸ್ಥಾನ ಮಠದ ಟ್ರಸ್ಟಿ ನಾಗೇಶ ಭಾವಿಕಟ್ಟಿ, ಕರ್ನಾಟಕ ರಾಜ್ಯ ದೇವಾಂಗ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಆನಂದ ಹುಲಮನಿ, ನೇಕಾರ ಸಮುದಾಯಗಳ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಶ್ವಿನಕುಮಾರ್ ಕೋಷ್ಠಿ, ಕರ್ನಾಟಕ ರಾಜ್ಯ ದೇವಾಂಗದ ಸಂಘದ ವಿಜಯಪುರ ನಗರ ಘಟಕದ ಅಧ್ಯಕ್ಷ ಪ್ರಸಾದ ಬಸರಕೋಡ ಆಗಮಿಸುವರು ಎಂದು ತಾಲೂಕು ಸಂಘಟನಾ ಕಾರ್ಯದರ್ಶಿ ಎಸ್.ಆಯ್.ಹೆಬ್ಬಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುವೆಂಪು ಮಾನವ ಸಮಾನತೆಯ ಹರಿಕಾರ :ಎಸಿ ಗದ್ಯಾಳ



**ಉದಯರಶ್ಮಿ ನ್ಯೂಸ್**ಇಂಡಿ: ಓ ನನ್ನ ಚೇತನ ಆಗು ನೀ ಅನಿಕೇತನ ಎಂದು ವಿಶ್ವ ಮಾನವ ಸಂದೇಶ ನೀಡಿದ ಕುವೆಂಪು ಒಂದು ಧೀಮಂತ ಚೇತನ. ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಕೃತಿ ಸಾಧ್ಯತೆಗಳನ್ನು ಸಮೃದ್ಧವಾಗಿ ನೀಡಿದ ಕುವೆಂಪು ಮಾನವ ಸಮಾನತೆಯ ಹರಿಕಾರರಾಗಿದ್ದರು ಎಂದು ಕಂದಾಯ ಉಪವಿಭಾಗಾಧಿಕಾರಿ ಅಬೀದ್ ಗದ್ಯಾಳ ಹೇಳಿದರು.


ಶುಕ್ರವಾರ ಪಟ್ಟಣದ ಮಿನಿ ವಿಧಾನಸೌಧದಲ್ಲಿ ತಾಲೂಕು ಆಡಳಿತ ವತಿಯಿಂದ ನಡೆದ ಕುವೆಂದು ಜನ್ಮ ದಿನದ ಸಮಾರಂಭದಲ್ಲಿ ಅವರು ಮಾತನಾಡಿದರು.

ಬದುಕಿನ ಸಣ್ಣ ಸಂಗತಿಗಳು ಚಿಲ್ಲರೆ ಮನಸುಗಳು ಅವರೆನ್ನಂದೂ ಬಾಧಿಸಲಿಲ್ಲ. ಕಡೆಗಣಿಸಲ್ಪಟ್ಟವರಿಗೆ ಉತ್ತಮ ಸ್ಥಾನವನ್ನು ನೀಡಿ ನೋವುಂಡ ಪಾತ್ರಗಳಿಗೆ ದನಿಯಾಗಿ ನಿಂತರು ಎಂದರು.

ಗ್ರೇಡ್ 2 ತಹಸೀಲ್ದಾರ ಧನಪಾಲಶೆಟ್ಟಿ, ಬಸವರಾಜ ರಾಹೂರ, ಎಸ್.ಆರ್. ಮುಜಗೊಂಡ, ಎಡಿ-ಎಲ್ಆರ್ ಕಾಂಬಳೆ, ಎಂ.ಪಿ. ಕೊಡತೆ, ಲಲಿತಾ ಬಗಲಿ ಮತ್ತಿತರಿದ್ದರು.

## ದುರ್ಜನರ ಸಂಗ

**ಉದಯರಶ್ಮಿ ನ್ಯೂಸ್**



ವಿದ್ಯಾರ್ಥಿನಿಧಿ

– ಮಂಡ್ಯ.ಮ.ನಾ.ಉಡುಪ


ಕುರಿಗಳನ್ನು ಕಾಯಲು ದೊಡ್ಡಿಯ ಬಳಿ ಮಲಗುತ್ತಿದ್ದ ನಾಯಿ ಬಲು ಚುರುಕಾಗಿತ್ತು. ಎಡೆಬಿಡದೆ ಕಾವಲು ಕಾಯುತ್ತಿತ್ತು. ಇದು ತೋಳಲ್ಲಿ ಬಹಳ ಕಷ್ಟಕ್ಕಿಟ್ಟುಕೊಂಡಿತು. ಹೇಗಾದರೂ ಮಾಡಿ ನಾಯಿಯ ಲಕ್ಷವನ್ನು ಬೇರೆಡೆ ಎಳೆದು ತಾನು ದೊಡ್ಡಿಯನ್ನು ಪ್ರವೇಶಿಸಿ ಕೆಲವಾದರೂ ಕು-ರಿಗಳನ್ನು ಕಬಳಿಸಬೇಕು ಎಂದದರ ಯೋಚನೆಯಾಗಿತ್ತು. ಹೀಗೆ ಯೋಚನೆ ಮಾಡುತ್ತಿದ್ದಂತೆ ತೋಳಕ್ಕೆ ಫಕ್ಕನೆ ನೆನಪಾಯಿತು..

'ನಿಜ, ನಾಯಿಗೆ ಎಲುಬು ಚೀಪುವುದೆಂದರೆ ಬಹಳ ಆಸೆ.' ಅಂತಲೇ ತೋಳ ಪ್ರತಿದಿನ ಎಲ್ಲಿಂದಲಾದರೂ ಒಂದು ಎಲುಬು ಸಂಪಾದಿಸಿ ತಂದು ದೊಡ್ಡಿಯ ಅಕ್ಕಪಕ್ಕದಲ್ಲೆಲ್ಲಾದರೂ ಇಡುತ್ತಿತ್ತು. ನಾಯಿಗೆ ಎಲುಬು ಸಿಕ್ಕಿದರೂ

ಅದು ಯಾರು ತಂದಿಟ್ಟಿದ್ದು ಎಂದು ಗೊತ್ತಾಗಲಿಲ್ಲ.

ಒಂದು ದಿನ ತೋಳ ಎಲುಬು ತರುವುದನ್ನೂ, ಅದನ್ನು ತನ್ನ ದೊಡ್ಡಿಯ ಸಮೀಪದಲ್ಲಿ ಇಟ್ಟು ಹೋಗುವುದನ್ನು ನಾಯಿ ನೋಡಿತು. ತೋಳನ ಮೇಲೆ ಅದಕ್ಕೆ ಇದ್ದ ವೈಮನಸ್ಯ ಅಂದಿನಿಂದ ದೂರವಾಯಿತು.

ಹೀಗೆ ತೋಳ ಮತ್ತು ನಾಯಿ ಇಬ್ಬರೂ ಸಂಜೆಯ ಹೊತ್ತಿಗೆ ಸೇರಿ ಅದೂ ಇದೂ ಮಾತನಾಡಿಕೊಳ್ಳುತ್ತಿದ್ದುವು. ಒಂದು ದಿನ ತೋಳ ನಾಯಿಗೆ ಕುರಿಯ ಎಲುಬು ತುಂಬ ರುಚಿಕಟ್ಟಾಗಿರುವುದರಿಂದ ಅದನ್ನು ದಿನವೂ ತಿಂದರೆ ತುಂಬಾ ಒಳ್ಳೆಯದು ಎಂದು ಉಪದೇಶ ಮಾಡಿತು.



"ಅದೆಲ್ಲ ಸರಿ. ಆದರೆ ನಿನಗೆ ದಿನವೂ ಎಲುಬು ಹೇಗೆ ಸಿಕ್ಕುತ್ತದೆ ?"- ಕೇಳಿತು ನಾಯಿ.

"ಅದೆಲ್ಲ ವಿಚಾರ ನನಗೆ ಬಿಡು, ನಾನು ನೋಡಿಕೊಳ್ತೇನೆ"- ಎಂದಿತು ತೋಳ.



ತದನಂತರ ಪ್ರತಿದಿನ ತೋಳ ದೊಡ್ಡಿಯಿಂದ ಕುರಿಗಳನ್ನು ಒಂದೊಂದಾಗಿ ಅಪಹರಿಸಿ ತಿನ್ನುತ್ತಿತ್ತು. ಅದರಲ್ಲಿ ಒಂದೆರಡು ಎಲುಬುಗಳನ್ನು ಚೀಪಲು ನಾಯಿಗೆ ನೀಡುತ್ತಿತ್ತು, ಹೀಗೆ ದಿನಗಳೆದಂತೆ ದೊಡ್ಡಿಯಲ್ಲಿ ಕುರಿಗಳು ಮಾಯವಾಗುತ್ತಿರುವುದನ್ನು ಗಮನಿಸಿದ ಕುರುಬ ನಾಯಿಯನ್ನು ಅದರ ವಿಶ್ವಾಸಘಾತಕತನಕ್ಕೆ ಗುಂಡಿಕ್ಕಿ ಕೊಂದನು.

ದುರ್ಜನರ ಸಂಗ ಎಂದೂ ಅಪಾಯಕಾರಿಯೆ.

## ಕಾವ್ಯರಶ್ಮಿ

– ಡಾ. ರಾಜಶೇಖರ ನಾಗೂರ

("ನಮ್ಮ ಕಥಾ ಅರಮನೆ" ಬರಹಗಾರರು)




### ಕನ್ನಡಿ ನಾನಾದೆ..


ಈ ಕಡೆಯಿಂದ ನೋಡಿದರೆ
ಆ ಕಡೆಯ ಜಗತ್ತು ಕಾಣುವ
ಪಾರದರ್ಶಕ ಗಾಜಿನಂತಿದ್ದೆ.

ಮೋಸದ ಗಾಯಗಳಿಂದ
ಮನುಷ್ಯ ಮುಖವಾಡಗಳ
ನೋಡಿ ಬೇಸತ್ತು ಕನ್ನಡಿಯಾದೆ.

ಈಗ ನನ್ನ ನೋಡಿದವರ ಮುಖ
ಅವರಿಗೇ ಕಾಣುವಂತಿರುವೆ.
ನಕ್ಕರೆ ನಗುವೆ, ಅತ್ತರೆ ಅಳುವೆ.



## ಚಳಿಗಾಲದ ವಿಶೇಷ ಅಡುಗೆಗಳು ಹಾಗೂ ಆರೋಗ್ಯದ ಸಂರಕ್ಷಣೆ



ಭಾವರಶ್ಮಿ

– ಚೇತನ ಭಾರ್ಗವ

("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಶಿಶಿರ ಋತುವಿನ ಆಗಮನದೊಂದಿಗೆ ಚಳಿಗಾಲ ಶುರುವಾಗುತ್ತದೆ. ಚುಮುಚುಮು ಚಳಿಯೊಂದಿಗೆ ಬಿಸಿ ಬಿಸಿ ಕಾಫಿಯನ್ನು ಹೀರಲು ಬಹಳ ಹಿತವೆನಿಸುತ್ತದೆ. ಕೆಲವರು ಚಳಿಯನ್ನು ಆಸ್ವಾದಿಸಲು ಊಟಿ ಕೊಡೈಕೆನಾಲ್, ಚಿಕ್ಕಮಗಳೂರು ಅಂತಹ ಹಿಲ್ ಸ್ಟೇಷನ್ ಪ್ರದೇಶಗಳಿಗೆ ಪ್ರವಾಸ ಹೋಗುತ್ತಾರೆ. ಚಳಿಗಾಲದಲ್ಲಿ ಮುಂಜಾನೆಯ ಮಂಜು ಆಕಾಶಕ್ಕೆ ಹಾಗೂ ಭೂಮಿಗೆ ಸೇತುವೆಯ ರೀತಿ ಬೆಸೆದಿರುತ್ತದೆ. ಚಳಿಗಾಲದಲ್ಲಿ ಪ್ರಕೃತಿಯ ಸೌಂದರ್ಯ ದುಪ್ಪಟ್ಟಾಗಿರುತ್ತದೆ.

ಚಳಿಗಾಲದಲ್ಲಿ ಸೂಕ್ಷ್ಮಾಣು ಜೀವಿಗಳು ವೇಗವಾಗಿ ಬೆಳೆಯುತ್ತವೆ. ಹಾಗಾಗಿ ನಾವು ರೋಗನಿರೋಧಕ ಶಕ್ತಿ ಹೆಚ್ಚಿರುವ ಆಹಾರವನ್ನು ಸೇವಿಸಬೇಕು. ವಾತಾವರಣದ ತಾಪಮಾನ ಕಡಿಮೆಯಾಗಿ ನಮ್ಮ ದೇಹದ ತಾಪಮಾನವೂ ಕಡಿಮೆಯಾಗುತ್ತದೆ. ದೇಹವು ಜೀರ್ಣಾಂಗ ಕ್ರಿಯೆಯ ಮೂಲಕ ತನ್ನ ಉಷ್ಣಾಂಶವನ್ನು ಹೆಚ್ಚಿಸಿಕೊಳ್ಳುತ್ತದೆ. ಆದ್ದರಿಂದ ಈ ಸಮಯದಲ್ಲಿ ಹಸಿವು ಹೆಚ್ಚಾಗುತ್ತದೆ. ಬಿಸಿಬಿಸಿ ಆಹಾರವನ್ನು ಸೇವಿಸಬೇಕು ಹಾಗೂ ಕರಿದ ಪದಾರ್ಥವನ್ನು ತಿನ್ನಬೇಕು ಎಂದು ಎನಿಸುತ್ತದೆ. ಕ-ರಿದ ಪದಾರ್ಥಗಳನ್ನು ತಿನ್ನುವುದರಿಂದ ಜೀರ್ಣಕ್ರಿಯೆಗೆ ತೊಂದರೆಯಾಗುತ್ತದೆ. ಹಾಗಾಗಿ ಈ ಋತುಮಾನದಲ್ಲಿ ಸಿಗುವ ಹಣ್ಣು ಮತ್ತು ತರಕಾರಿಗಳನ್ನು ಸೇವಿಸುವುದು ಉತ್ತಮ.

ಬ್ರೊಕೋಲಿ, ಬೀಟ್ರೂಟ್ ಆಲೂಗೆಡ್ಡೆ, ಕ್ಯಾರೆಟ್ ನಂತಹ ಬೇರು ತರಕಾರಿಗಳನ್ನು ನಾರುಯುಕ್ತ ಪದಾಥ-ರ್ಗಗಳನ್ನು ಪಾಲಕ್ ಸೊಪ್ಪು, ಕಡಲೆಕಾಯಿ ಬಾದಾಮಿ, ಗೋಡಂಬಿ ಪಿಸ್ತಾ ಗಳನ್ನು ಸೇವಿಸುವುದರಿಂದ ಚಯಾಪಚಾಯ ಕ್ರಿಯೆ ವೇಗವಾಗುತ್ತದೆ. ಅಲ್ಲದೆ ಇವು ನಮ್ಮ ದೇಹದ ಉಷ್ಣಾಂಶವನ್ನು ಹೆಚ್ಚಿಸುತ್ತದೆ.

ಪಪ್ಪಾಯ, ಕಿವಿ, ಸೀಬೆ, ಕಿತ್ತಳೆ ದಾಳಿಂಬೆ ಹಣ್ಣುಗಳು ಚಳಿಗಾಲಕ್ಕೆ ಅತ್ಯುತ್ತಮವಾಗಿರುತ್ತದೆ. ಈ ಸಮಯದಲ್ಲಿ ಸೇವಿಸುವುದರಿಂದ ದೇಹಕ್ಕೆ ಬೇಕಾಗುವ ವಿಟಮಿನ್ ಸಿ ಸಿಗುತ್ತದೆ. ಕಿತ್ತಳೆ ಹಣ್ಣು ಶೀತವಾದರೆ ಅದರ ಬದಲಾಗಿ ಮೂಸಂಬಿ ಹಣ್ಣಿನ ಉಪಯೋಗ ಒಳ್ಳೆಯದು. ಸೀಬೆ ಹಣ್ಣಿಗೆ ಉಪ್ಪು ಮತ್ತು ಕಾಳು ಮೆಣಸಿನ ಪುಡಿಯನ್ನು ಉದುರಿಸಿ ತಿನ್ನುವುದರಿಂದ ಕಫ ಹಾಗೂ ನೆಗಡಿ ಆಗುವುದಿಲ್ಲ.

ಚಳಿಗಾಲದ ಸಮಯದಲ್ಲಿ ಅಡುಗೆಯಲ್ಲಿ ಶುಂಠಿ, ಬೆಳ್ಳುಳ್ಳಿ, ಪುದೀನ, ದೊಡ್ಡಪತ್ರೆ, ತುಳಸಿ ಒಂದಲಗ, ಅಮೃತಬಳ್ಳಿಯನ್ನು ಬಳಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ.

ಪ್ರತಿದಿನ ಕಷಾಯ ಕುಡಿಯುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಆಗ ನೆಗಡಿ ವಾತದಿಂದ ನಮ್ಮ ದೇಹವನ್ನು ನಾವು ಕಾಪಾಡಿಕೊಳ್ಳಬಹುದು. ಕಷಾಯಕ್ಕೆ ಕಾಳು ಮೆಣಸು, ಅರಿಶಿನ, ಶುಂಠಿ, ಚಕ್ಕೆ ,ಲವಂಗ ಏಲಕ್ಕಿ ಮುಂತಾದ ಪದಾರ್ಥಗಳನ್ನು ಬಳಸಬೇಕು.



ಚಳಿಗಾಲದಲ್ಲಿ ಕಾಯಿಸಿ ಆರಿಸಿದ ನೀರನ್ನು ಸೇವಿಸಬೇಕು ಇದರಿಂದ ಗಂಟಲಿಗೂ ಹಿತವಾಗುತ್ತದೆ.

ಚಿಕ್ಕ ಮಕ್ಕಳಿಗೆ ಈ ಸಮಯದಲ್ಲಿ ದೊಡ್ಡಪತ್ರೆ ರಸವನ್ನು ಜೇನುತುಪ್ಪದೊಂದಿಗೆ ಬೆರೆಸಿ ಕೊಡುವುದರಿಂದ, ಹಿಪ್ಪಲಿ ಜ್ಯೇಷ್ಠ ಮಧು ಜಾಯಿಕಾಯಿಯನ್ನು ವಾರಕ್ಕೆ ಒಮ್ಮೆ ತೇದಿ ಉಗುರು ಬೆಚ್ಚಗಿನ ನೀರಿನೊಂದಿಗೆ ಸೇರಿಸಿ ಕುಡಿಸುವುದರಿಂದ ನೆಗಡಿ ಕಫದಿಂದ ಮಕ್ಕಳ ಆರೋಗ್ಯವನ್ನು ಕಾಪಾಡಬಹುದು.

ಹೊರಗಿನ ಆಹಾರ, ಫ್ರಿಡ್ಜ್ ನಲ್ಲಿ ಇಟ್ಟ ಆಹಾರವನ್ನು ತಿನ್ನುವುದನ್ನು ಆದಷ್ಟು ಕಡಿಮೆ ಮಾಡಬೇಕು . ಆಹಾರದಲ್ಲಿ ಹಾಲು ತುಪ್ಪದ ಬಳಕೆಯನ್ನು ಮಿತ ಪ್ರಮಾಣದಲ್ಲಿ ಸೇವಿಸಬೇಕು. ಆಗ ದೇಹಕ್ಕೆ ಒಳ್ಳೆಯ ಕೊಬ್ಬಿನಂಶ ಸಂಚಯವಾಗುತ್ತದೆ. ಚಳಿಗಾಲದಲ್ಲಿ ಶುಷ್ಕ ವಾತಾವರಣ ಇರುವುದರಿಂದ ದೇಹದಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತದೆ ಹಾಗಾಗಿ ಹೆಚ್ಚು ನೀರು ಕುಡಿಯಬೇಕು.

ಶುಷ್ಕ ವಾತಾವರಣದ ಸಲುವಾಗಿ ಕೈ ಮೈಗಳ ಚರ್ಮವು ಚರ್ಮವು ಒಡೆಯುವುದು ಸಾಮಾನ್ಯ. ಇದಕ್ಕೆ ಪರಿಹಾರವೆಂದರೆ ಕೊಬ್ಬರಿ ಎಣ್ಣೆಯ ಉಪಯೋಗ. ಕೊಬ್ಬರಿ ಎಣ್ಣೆಯನ್ನು ಕೈಮೈಗಳಿಗೆ ಲಘುವಾಗಿ ಲೇಪಿಸುವುದ-ರಿಂದ ಒಣ ಚರ್ಮದ ಸಮಸ್ಯೆಯಿಂದ ಪಾರಾಗಬಹುದು. ವಾರಕ್ಕೊಮ್ಮೆ ತಲೆಗೆ ಹರಳೆಣ್ಣೆ ಹಚ್ಚಿ ಸ್ನಾನ ಮಾಡುವುದರಿಂದ ದೇಹದ ಉಷ್ಣತೆ ನಿಯಂತ್ರಣದಲ್ಲಿರುತ್ತದೆ. ಸ್ನಾನ ಮಾಡುವಾಗ ಬೆಚ್ಚಗಿನ ನೀರು ಉತ್ತಮ ಅದರಲ್ಲಿ ಎರಡು ಹನಿ ಕೊಬ್ಬರಿ ಎಣ್ಣೆಯನ್ನು ಹಾಕಿ ಸ್ನಾನ ಮಾಡುವುದರಿಂದ ಒಣ ಚರ್ಮದ ಸಮಸ್ಯೆಯಿಂದ ಪಾರಾಗಬಹುದು.

ಚಳಿಗಾಲದಲ್ಲಿ ಒಣ ಚರ್ಮದಿಂದಾಗಿ ಮೈ ಕೈ ಎಲ್ಲಾ ತು-ರಿಕೆಯಾಗುವುದು ಸಹಜ ತುಟಿಗಳು ಕಾಲಿನ ಹಿಮ್ಮಡಿ ಒಡೆಯುತ್ತವೆ. ತೆಂಗಿನ ಎಣ್ಣೆಯಿಂದ ಮಸಾಜ್ ಮಾಡುವುದರಿಂದ ಚರ್ಮದ ಮೇಲೆ ಮಾಯ್ಶ್ಚರೈಸರ್ ಆಗಿ ಕೆಲಸ ಮಾಡುತ್ತದೆ. ಜೇನುತುಪ್ಪವನ್ನು ಕೈಕಾಲುಗಳಿಗೆ ಹಚ್ಚಿ ಐದು ನಿಮಿಷಗಳವರೆಗೆ ಮಸಾಜ್ ಮಾಡಿಕೊಳ್ಳುವುದರಿಂದಲೂ ಚರ್ಮವು ತೇವವಾಗಿದ್ದು ಒಣ ಚರ್ಮದಿಂದ ಮುಕ್ತಿ ಸಿಗುತ್ತದೆ .



ಚಳಿಗಾಲದಲ್ಲಿ ಚರ್ಮಕ್ಕೆ ಬಾದಾಮಿ ಎಣ್ಣೆಯನ್ನು ಉಪಯೋಗಿಸಬೇಕು ಇದರಲ್ಲಿ ವಿಟಮಿನ್ ಇ ಹೇರಳವಾಗಿದೆ. ಇದು ಚರ್ಮಕ್ಕೆ ಹೊಳಪನ್ನು ನೀಡುತ್ತದೆ. ಪೆಟ್ರೋಲಿಯಂ ಜೆಲ್ಲಿ ಬಳಸುವುದ-ರಿಂದ ಚರ್ಮ ಒಣಗುವುದನ್ನು ತಡೆಗಟ್ಟಬಹುದು.